ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ ವಾರ್ತಾಪತ್ರಿಕೆ

ಸಂಪುಟ : 3 । ಸಂಚಿಕೆ : 6 ಜುಲೈ : 2021 ಪುಟಗಳು : 20 । ಬೆಲೆ : 25/–



## ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಕಚೇರಿ ಕಟ್ಟಡ ನಿರ್ಮಾಣ – ಶಂಕುಸ್ಥಾಪನೆ

## ಸಚಿವರು – ಸಹಕಾರಿ ಗಣ್ಯರಿಂದ ಶುಭ ಹಾರೈಕೆ



# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ
# ನೂತನ ಆಡಳಿತ ಕಚೇರಿ ನಿರ್ಮಾಣಕ್ಕೆ ಭೂಮಿಪೂಜೆ





# 2020ರಲ್ಲಿ ಭಾರತೀಯರ ಸ್ವಿಸ್ ಬ್ಯಾಂಕ್ ಠೇವಣಿ ಮೊತ್ತದಲ್ಲಿ ಏರಿಕೆ




**ನವದೆಹಲಿ :** ಸ್ವಿಸ್ ಬ್ಯಾಂಕುಗಳಲ್ಲಿ ಭಾರತದ ವ್ಯಕ್ತಿಗಳು, ಸಂಸ್ಥೆಗಳು ಹಾಗೂ ಇನ್ನಿತರ ಹಣಕಾಸು ಸಂಸ್ಥೆಗಳು–ಭಾರತದ ಮೂಲದ ಶಾಖೆಗಳಿಂದ ಇಟ್ಟಿರುವ ಹಣದ ಮೊತ್ತ ರೂ.20,700 ಕೋಟಿಗೆ ಏರಿಕೆಯಾಗಿದೆ ಎಂದು ಸ್ವಿಟ್ಜರ್ಲ್ಯಾಂಡ್‌ನ ಕೇಂದ್ರ ಬ್ಯಾಂಕ್ ಬಿಡುಗಡೆ ಮಾಡಿರುವ ಅಂಕಿ–ಅಂಶಗಳಿಂದ ತಿಳಿದುಬಂದಿದೆ.

2020ರಲ್ಲಿ ಭಾರತದ ಹಣ 20,700 ಕೋಟಿ ರೂಪಾಯಿಗಳಿಗೆ ಏರಿಕೆಯಾಗಿರುವುದು 13 ವರ್ಷಗಳಲ್ಲೇ ಅತಿ ಹೆಚ್ಚಿನ ಏರಿಕೆ ಎಂದು ಪರಿಗಣಿಸಲಾಗಿದೆ. ಆದರೆ ಗ್ರಾಹಕ ಠೇವಣಿ ಮೊತ್ತ ಕುಸಿತ ಕಂಡಿರುವುದು ಗಮನಾರ್ಹ ಸಂಗತಿಯಾಗಿದ್ದು, ಒಟ್ಟು ಹಣದ ಮೊತ್ತ 2019ರ ಅಂತ್ಯದಲ್ಲಿ ರೂ.6,625 ಕೋಟಿಯಿಂದ ಏರಿಕೆಯಾಗಿದ್ದು 13 ವರ್ಷಗಳಲ್ಲೇ ಇದು ಅತ್ಯಂತ ಹೆಚ್ಚಿನ ಏರಿಕೆಯ ಪ್ರಮಾಣವಾಗಿದೆ.

2006ರಲ್ಲಿ ಭಾರತದಿಂದ ಸ್ವಿಸ್ ಬ್ಯಾಂಕಿನಲ್ಲಿ ಇರಿಸಲಾಗಿದ್ದ ಮೊತ್ತ 6.5 ಬಿಲಿಯನ್ ಸ್ವಿಸ್ ಫ್ರಾಂಕ್ ಗಳಷ್ಟಿತ್ತು. 2011, 2013 ಹಾಗೂ 2017ರಲ್ಲಿ ಹೊರತುಪಡಿಸಿದರೆ ಬಹುತೇಕ ಇಳಿಕೆಯಾಗಿತ್ತು ಎಂದು ಸ್ವಿಸ್ ನ್ಯಾಷನಲ್ ಬ್ಯಾಂಕ್ ಹೇಳಿದೆ.

**ಸ್ವಿಸ್‌ಬ್ಯಾಂಕ್ ಠೇವಣಿ – ಮಾಹಿತಿ ಕೇಳಿದ ಕೇಂದ್ರ :** ಭಾರತೀಯರು ಸ್ವಿಸ್‌ಬ್ಯಾಂಕ್‌ನಲ್ಲಿ ಹೊಂದಿರುವ ಠೇವಣಿಗಳ ಕುರಿತು ಮಾಹಿತಿ ನೀಡುವಂತೆ ಭಾರತ ಸರ್ಕಾರವು ಬ್ಯಾಂಕ್‌ನ ಅಧಿಕಾರಿಗಳನ್ನು ಕೇಳಿದೆ. ವ್ಯಕ್ತಿಗಳು ಮತ್ತು ಸಂಸ್ಥೆಗಳು 2020ರಲ್ಲಿ ಇಟ್ಟಿರುವ ಮೊತ್ತದಲ್ಲಿ ಆಗಿರುವ ಬದಲಾವಣೆಗಳಿಗೆ ಸಂಭವನೀಯ ಕಾರಣಗಳನ್ನು ನೀಡುವಂತೆ ಕೇಂದ್ರ ಹಣಕಾಸು ಸಚಿವಾಲಯ ಕೇಳಿದೆ. ಸ್ವಿಸ್‌ಬ್ಯಾಂಕ್‌ನಲ್ಲಿ ಭಾರತೀಯರು ನೇರವಾಗಿ ಠೇವಣಿ ಇಡುತ್ತಿರುವ ಪ್ರಮಾಣವು 2019ರಿಂದ ಇಳಿಕೆ ಕಾಣುತ್ತಿದೆ ಎಂದಷ್ಟೇ ಸಚಿವಾಲಯ ಹೇಳಿದೆ. ಆದರೆ ಎಷ್ಟು ಮೊತ್ತ ಎನ್ನುವ ಮಾಹಿತಿ ನೀಡಿಲ್ಲ. ಭಾರತದವರು ಸ್ವಿಸ್‌ಬ್ಯಾಂಕ್‌ಗಳಲ್ಲಿ ಇಟ್ಟಿರುವ ಹಣದ ಮೊತ್ತವು 2020ರಲ್ಲಿ ರೂ.20,706 ಕೋಟಿಗೆ ಏರಿಕೆ ಕಂಡಿದೆ. ಬೇರೆ ಬೇರೆ ಹಣಕಾಸು ಉತ್ಪನ್ನಗಳ ಮೂಲಕ ಭಾರತದ ವ್ಯಕ್ತಿಗಳು ಹಾಗೂ ಸಂಸ್ಥೆಗಳಿಂದ ಸ್ವಿಸ್ ಬ್ಯಾಂಕ್‌ಗಳಲ್ಲಿ ಇಷ್ಟು ಮೊತ್ತವನ್ನು ಇರಿಸಲಾಗಿದೆ. 13 ವರ್ಷಗಳಲ್ಲಿನ ಅತಿಹೆಚ್ಚಿನ ಮೊತ್ತ ಇದಾಗಿದೆ ಎಂದು ಸ್ವಿಸ್‌ಬ್ಯಾಂಕ್ ಮಾಹಿತಿಯನ್ನು ಆಧರಿಸಿ ಸುದ್ದಿಸಂಸ್ಥೆಯು ವರದಿ ಮಾಡಿದೆ. ಈ ಹಿನ್ನೆಲೆಯಲ್ಲಿ ಭಾರತ ಸರ್ಕಾರವು ಬ್ಯಾಂಕ್‌ನಿಂದ ಮಾಹಿತಿ ಕೇಳಿದೆ.


## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

SAHAKARA VARTHA PATHRIKE KANNADA MONTHLY
RNI-REG NO : KARKAN/2018/75796
POST REG NO : KNBGW-1816/2019-2021
POSTING DATE : 1 & 5. EVERY MONTH
POSTED AT : P/C RMS BHAVAN, BANGALORE PSO,
Blore-26 PUBLISHED ON : 30th of Previous Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತಮಂಡಳಿ


ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜೆ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೆಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀ ಕೆ.ಎಸ್.ಗುರುಪ್ರಸಾದ್
ಸಲಹೆಗಾರರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

Printed at : Biligiri Printers
Chamrajpet, Bengaluru - 18.






ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು

"ರಾಜ್ಯದ ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಸಹಕಾರ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವ ಸಹಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಸಹಕಾರಿ ವಾರಿಯರ್ಸ್ ಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರೆಲ್ಲರಿಗೂ ಅಭಿನಂದನೆಗಳು ಇಂಥವರಲ್ಲಿ ಹಲವಾರು ಜನರು ಸೋಂಕಿನಿಂದ ಮೃತಪಟ್ಟಿರುತ್ತಾರೆ. ಇದು ಅತ್ಯಂತ ದುಃಖಪಡುವ ವಿಚಾರವೂ ಹೌದು. ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಆಡಳಿತಮಂಡಳಿಯು ಮೃತಪಟ್ಟ ಸರ್ಕಾರಿ ನೌಕರರು, ಸಹಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಶ್ರದ್ಧಾಂಜಲಿ ಸಲ್ಲಿಸುತ್ತದೆ. ಅವರೆಲ್ಲರ ಸೇವೆಯನ್ನು ಇಂದು ಸ್ಮರಿಸಿಕೊಳ್ಳುವುದು ಅವಶ್ಯವೂ ಆಗಿದೆ."

# ಸಹಕಾರ ಸಂಸ್ಥೆಗಳು ಸಮಚಿತ್ತ ಕಾಯ್ದುಕೊಳ್ಳುವುದು ಅಗತ್ಯ

ಕಳೆದ ಹದಿನಾರು ತಿಂಗಳುಗಳಿಂದ ಕೋವಿಡ್ ಮಹಾಮಾರಿಗೆ ಇಡೀ ಜಗತ್ತೇ ತತ್ತರಿಸಿ ಹೋಗಿದೆ. ದೇಶದಲ್ಲಿ ಕೋವಿಡ್ ಎರಡನೇ ಅಲೆಯಿಂದ ಆರಂಭದಲ್ಲಿ ಆಮ್ಲಜನಕದ ತೊಂದರೆ ಎದುರಾಗಿತ್ತು. ಕ್ರಮೇಣ ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳಿಂದ ವಿದೇಶಗಳಿಂದಲೂ ಆಮ್ಲಜನಕ ದೊರೆತು ಜನರ ಪ್ರಾಣ ಉಳಿಸಲು ಸಾಧ್ಯವಾಯಿತು. ಪ್ರತಿನಿತ್ಯ ಸಹಸ್ರಾರು ಜನರು ಚೇತರಿಸಿಕೊಳ್ಳುತ್ತಿದ್ದಾರೆ.

ದೇಶದಲ್ಲಿ ಹದಿನಾರು ತಿಂಗಳಲ್ಲಿ ಲಕ್ಷಾಂತರ ಜನರು ಕೊರೋನಾ ತೀವ್ರ ಸೋಂಕಿನಿಂದ ಮರಣ ಹೊಂದಿದ್ದಾರೆ. ಕೊರೋನಾ ನಿರೋಧಕ ಲಸಿಕೆಗಳು ಈಗ ಲಭ್ಯವಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಾಗರೀಕರಿಗೆ ಉಚಿತವಾಗಿ ಲಸಿಕೆ ನೀಡುತ್ತಿರುವುದು ಅಭಿನಂದನೀಯ ವಿಚಾರವಾಗಿದೆ.

ರಾಜ್ಯದ ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಸಹಕಾರ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವ ಸಹಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಸಹಕಾರಿ ವಾರಿಯರ್ಸ್ ಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರೆಲ್ಲರಿಗೂ ಅಭಿನಂದನೆಗಳು ಇಂಥವರಲ್ಲಿ ಹಲವಾರು ಜನರು ಸೋಂಕಿನಿಂದ ಮೃತಪಟ್ಟಿರುತ್ತಾರೆ. ಇದು ಅತ್ಯಂತ ದುಃಖಪಡುವ ವಿಚಾರವೂ ಹೌದು. ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಆಡಳಿತಮಂಡಳಿಯು ಮೃತಪಟ್ಟ ಸರ್ಕಾರಿ ನೌಕರರು, ಸಹಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಶ್ರದ್ಧಾಂಜಲಿ ಸಲ್ಲಿಸುತ್ತದೆ. ಅವರೆಲ್ಲರ ಸೇವೆಯನ್ನು ಇಂದು ಸ್ಮರಿಸಿಕೊಳ್ಳುವುದು ಅವಶ್ಯವೂ ಆಗಿದೆ.

ಈ ನಡುವೆ ಸಹಕಾರ ಸಂಸ್ಥೆಗಳಲ್ಲಿ ಆರ್ಥಿಕ ನೆರವು ಪಡೆದ ಬಹುತೇಕ ಜನರು ಸಾಲ ಮರುಪಾವತಿ ಮಾಡುತ್ತಿದ್ದಾರೆ. ಹಲವು ಜನರು ಆರ್ಥಿಕ ಹಿನ್ನಡೆಯಿಂದ ಸಕಾಲದಲ್ಲಿ ಮರುಪಾವತಿ ಮಾಡುವುದು ಕಷ್ಟಕರವಾಗಿರಬಹುದು. ಇಂಥ ಸಂದರ್ಭಗಳಲ್ಲಿ ಸಹಕಾರಿ ಸಂಸ್ಥೆಗಳು ಅಂಥವರನ್ನು ಭೇಟಿ ಮಾಡಿ ಅವರ ಸಮಸ್ಯೆಗಳ ಇತ್ಯರ್ಥಕ್ಕೆ ಪರಿಹಾರಗಳನ್ನು ನೀಡಿ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವುದು ಒಳಿತು. ಹಾಗೆಯೇ, ಸಾಧ್ಯವಾದಲ್ಲಿ ಸದಸ್ಯರಲ್ಲಿ ಸಹಕಾರ ಸಂಘದ ಪ್ರಯೋಜನಗಳನ್ನು ಪಡೆಯುವಂತೆ ಸಲಹೆ ಮಾಡಿ, ಸಾಲ ಮರುಪಾವತಿಯ ಬಗ್ಗೆಯೂ ಜಾಗೃತಿ ಮೂಡಿಸುವುದು ಒಳಿತು ಎನಿಸುತ್ತದೆ. ಆದರೆ, ಯಾವುದೇ ಕಾರಣಕ್ಕೂ ಬಲವಂತದ ಪ್ರಕ್ರಿಯೆಗಳು ಆಗದಂತೆ ನೋಡಿಕೊಳ್ಳಬೇಕು. "ಸಹಕಾರ ಸಂಘ ನಮ್ಮದು" ಎಂಬ ಅಭಿಮಾನವನ್ನು ಅವರಲ್ಲಿ ತುಂಬಿ ಸಹಕಾರ ತತ್ವಗಳಲ್ಲಿ ಒಂದಾದ ಸಾಮಾಜಿಕ ಕಳಕಳಿಯಿಂದ ಕಾರ್ಯನಿರ್ವಹಿಸುವುದು ಉತ್ತಮವೆನಿಸುತ್ತದೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಟಿ.ಬಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಬಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಲಹೆಗಾರರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಸೈಬರ್ ವಂಚನೆ : ರಾಷ್ಟ್ರೀಯ ಸಹಾಯವಾಣಿ ಸಂಖ್ಯೆ 155260

**ನವದೆಹಲಿ :** ದೇಶದಲ್ಲಿ ಆನ್‌ಲೈನ್ ಅಥವಾ ಸೈಬರ್ ವಂಚನೆ ಪ್ರಕರಣಗಳೂ ಹೆಚ್ಚುತ್ತಿವೆ. ಇದನ್ನು ತಡೆಗಟ್ಟಲು ಮುಂದಾಗಿರುವ ಕೇಂದ್ರ ಸರ್ಕಾರವು ರಾಷ್ಟ್ರೀಯ ಸಹಾಯವಾಣಿ ಒದಗಿಸಿದೆ. ಸೈಬರ್ ವಂಚನೆಗೊಳಗಾಗಿ ಕಷ್ಟಪಟ್ಟು ಸಂಪಾದಿಸಿದ ಹಣ ಕಳೆದುಕೊಂಡವರು ಅಥವಾ ಹುಸಿ ಕರೆಗಳು ಬರುತ್ತಿದ್ದಂತೆಯೇ ಜನರು ಈ ಸಂಬಂಧ ವರದಿ ಮಾಡಲು ವೇದಿಕೆ ಕಲ್ಪಿಸಿದೆ.

**ಹೀಗಿರಲಿದೆ ಕಾರ್ಯಾಚರಣೆ**

- ಸೈಬರ್ ವಂಚನೆ ಸಂತ್ರಸ್ತರು 155260 ಸಹಾಯವಾಣಿಗೆ ಕರೆ ಮಾಡಿ ತಮ್ಮ ದೂರನ್ನು ನೀಡಬೇಕು.
- ಈ ಸಹಾಯವಾಣಿಯನ್ನು ಆಯಾ ರಾಜ್ಯಗಳ ಪೊಲೀಸ್ ಇಲಾಖೆ ಆಪರೇಟ್ ಮಾಡುತ್ತವೆ.
- ಪೊಲೀಸ್ ಆಪರೇಟರ್‌ಗಳು ನಿಮ್ಮ ಆನ್‌ಲೈನ್ ವಹಿವಾಟಿನ ವಿವರ ಮತ್ತು ಕರೆ ಮಾಡಿದವರ ವೈಯಕ್ತಿಕ ಮಾಹಿತಿಯನ್ನು ಬರೆದು ಟಿಕೆಟ್ ರೂಪದಲ್ಲಿರಿಸುತ್ತಾರೆ.
- ಈ ಟಿಕೆಟ್ ಅನ್ನು ಸಂಬಂಧಪಟ್ಟ ಬ್ಯಾಂಕ್‌ಗಳಿಗೆ (ಯಾವ ಬ್ಯಾಂಕ್‌ನಿಂದ ನಿಮ್ಮ ಹಣ ವರ್ಗಾವಣೆ ಆಗಿದೆಯೋ ಆ ಬ್ಯಾಂಕ್‌ಗಳಿಗೆ) ನೀಡುತ್ತಾರೆ.
- ದೂರು ಸಂಬಂಧ ಸಂತ್ರಸ್ತರ ಮೊಬೈಲ್ ಸಂಖ್ಯೆಗೆ ದೂರಿನ ಸ್ವೀಕೃತಿ ಸಂಖ್ಯೆಯ ಸಂದೇಶವನ್ನೂ ಕಳುಹಿಸುತ್ತಾರೆ.
- 24 ಗಂಟೆಗಳೊಳಗಾಗಿ ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್ (https://cybercrime.gov.in/) ನಲ್ಲಿ ವಂಚನೆಯ ಸಂಪೂರ್ಣ ವಿವರಗಳನ್ನು ಸಲ್ಲಿಸಲಾಗುತ್ತದೆ.
- ವಂಚಿಸಿದ ಹಣ ಇನ್ನೂ ಲಭ್ಯವಿದ್ದರೆ ಬ್ಯಾಂಕ್ ಅದನ್ನು ತಡೆಹಿಡಿಯುತ್ತದೆ. ಆಗ ವಂಚಕನು ಆ ಹಣವನ್ನು ಪಡೆಯಲು ಸಾಧ್ಯವಾಗುವುದಿಲ್ಲ.
- ಒಂದು ವೇಳೆ ವಂಚನೆಗೊಳಗಾದ ಹಣವು ಮತ್ತೊಂದು ಬ್ಯಾಂಕ್‌ಗೆ ವರ್ಗಾವಣೆಯಾಗಿದ್ದರೆ ಈ ಬ್ಯಾಂಕ್‌ಗೆ ಸೂಚನೆ ನೀಡಿ ವಂಚಕ ಹಣ ಪಡೆಯದಂತೆ ತಡೆಗಟ್ಟಲಾಗುತ್ತದೆ.
- ಹೀಗೆ ವಂಚಕರ ಕೈಗೆ ಹಣ ತಲುಪದಂತೆ ಈ ಪ್ರಕ್ರಿಯೆಯನ್ನು ಪುನರಾವರ್ತಿಸಲಾಗುತ್ತದೆ.
- ಈಗಾಗಲೆ ವಂಚಕ ಹಣ ಪಡೆದಿದ್ದರೆ ಕಾನೂನು ಕ್ರಮಗಳ ಮೂಲಕ ಪ್ರಕರಣ ಭೇದಿಸಲಾಗುತ್ತದೆ.

**ಸುಭಾಷಿತ :** ದಡ್ಡರಿಗೆ ತಾವು ತುಂಬಾ ಬುದ್ಧಿವಂತರೆಂಬ ಭ್ರಮೆಯಿರುತ್ತದೆ; ಬುದ್ಧಿವಂತರಿಗೆ ತಾವೂ ದಡ್ಡರೇ ಎಂಬ ಅರಿವಿರುತ್ತದೆ. – ವಿಲಿಯಂ ಷೇಕ್ಸ್‌ಪಿಯರ್

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

## ಬೆಂಗಳೂರಿನಲ್ಲಿ ವಿವಿಧ ಕೃಷಿ ಸಾಲ ವಿತರಣೆಯ ರೈತ ಸ್ಪಂದನ ಕಾರ್ಯಕ್ರಮ

# 30 ಲಕ್ಷ ರೈತರಿಗೆ ರೂ. 21 ಸಾವಿರ ಕೋಟಿ ಬೆಳೆ ಸಾಲ ವಿತರಣೆ ಗುರಿ : ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ



**ಬೆಂಗಳೂರು :** ನಮ್ಮದು ರೈತ ಪರ ಸರ್ಕಾರ ಅನ್ನೋದು ತಮ್ಮೆಲ್ಲರಿಗೂ ಗೊತ್ತಿದೆ. ರೈತರು, ಆರೋಗ್ಯ, ಶಿಕ್ಷಣ ನಮ್ಮ ಸರ್ಕಾರದ ಆದ್ಯತೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸಹಕಾರ ಇಲಾಖೆ ಹಾಗೂ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಜೂನ್ 21 ರಂದು ಹಮ್ಮಿಕೊಂಡಿದ್ದ 'ರೈತ ಸ್ಪಂದನ' ಹೆಸರಿನಲ್ಲಿ 2021–22ನೇ ಸಾಲಿಗೆ ವಿವಿಧ ಕೃಷಿ ಸಾಲ ವಿತರಣೆ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಸಾಲ ವಿತರಣೆ ಮಾಡಿ ಅವರು ಮಾತನಾಡಿದರು.

ರೈತರಿಗೆ, ಸ್ತ್ರೀಶಕ್ತಿ ಗುಂಪುಗಳಿಗೆ ಸಾಲ ನೀಡಿದ್ದೇವೆ. ಪ್ರಸಕ್ತ ಸಾಲಿನಲ್ಲಿ



ಕೋವಿಡ್ ಸಂಕಷ್ಟದಲ್ಲಿರುವ ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ ನೀಡುವ ಉದ್ದೇಶ ಹೊಂದಿದ್ದೇವೆ. 30.26 ಲಕ್ಷ ರೈತರಿಗೆ ಶೂನ್ಯ ಬಡ್ಡಿದರದಲ್ಲಿ 19,370 ಕೋಟಿ ರೂ. ಅಲ್ಪಾವಧಿ ಬೆಳೆ ಸಾಲ ಮತ್ತು 0.60 ಲಕ್ಷ ರೈತರಿಗೆ ಶೇ.3ರ ಬಡ್ಡಿ ದರದಲ್ಲಿ 1,440 ಕೋಟಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ವಿತರಣೆ ಗುರಿ ಹೊಂದಲಾಗಿದೆ.ರೈತ ಸ್ಪಂದನ ಕಾರ್ಯಕ್ರಮ: ರೈತ ಗೀತೆ ಹಾಡಿಸಿದ ಸಿಎಂ ಬಿಎಸ್‌ವೈಕಳೆದ ವರ್ಷದಲ್ಲಿ ಸಹಕಾರ ಸಂಘಗಳು ಕೃಷಿ ಕ್ಷೇತ್ರದಲ್ಲಿ 25.67 ಲಕ್ಷ ರೈತರಿಗೆ 16,641.00 ಕೋಟಿ ರೂ.ಗಳ ಅಲ್ಪಾವಧಿ ಕೃಷಿ ಸಾಲ, 0.52 ಲಕ್ಷ ರೈತರಿಗೆ 1260.21 ಕೋಟಿ ರೂ.ಗಳ ಮಧ್ಯಮಾವಧಿ, ದೀರ್ಘಾವಧಿ ಸಾಲ ವಿತರಣೆ ಮಾಡಿದ್ದು, ಗುರಿಗೆ ಎದುರಾಗಿ ಶೇ.114ರಷ್ಟು ಸಾಧನೆ ಮಾಡಿರುತ್ತೇವೆ. ಇದರಲ್ಲಿ 0.57 ಲಕ್ಷ ರೈತರಿಗೆ ರೂ.105.64 ಕೋಟಿಗಳ ಸಾಲವನ್ನು ಹೈನುಗಾರಿಕೆ ಚಟುವಟಿಕೆಗೆ ನೀಡಲಾಗಿದೆ.

ಇದೊಂದೇ ಇಲಾಖೆಯಲ್ಲ. ಎಲ್ಲ ಇಲಾಖೆಯಲ್ಲೂ ಉತ್ತಮ ಕೆಲಸ ಮಾಡಿದ್ದೇವೆ. ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ 4.61 ಕೋಟಿ ರೂ. ಮೊತ್ತದ ಆಹಾರ ಕಿಟ್, ವೈದ್ಯಕೀಯ ಪರಿಕರಗಳನ್ನು ಸಹಕಾರ ಸಂಘಗಳು ನೀಡಿವೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಇಲ್ಲಿಯವರೆಗೂ 58 ಕೋಟಿ ರೂ. ನೆರವು ನೀಡಿ ತಮ್ಮ ಸಾಮಾಜಿಕ ಜವಾಬ್ದಾರಿ ನಿರ್ವಹಣೆ ಮಾಡುತ್ತಿವೆ. ಈ ಸಂಘಗಳಿಗೆ ಆಭಾರಿಯಾಗಿದ್ದೇವೆ ಎಂದು ಹೇಳಿದರು.

**32 ಲಕ್ಷ ಸದಸ್ಯರಿಗೆ ಅನುಕೂಲ :** ಮೇ ಅಂತ್ಯಕ್ಕೆ 3.29 ಲಕ್ಷ ರೈತರಿಗೆ ರೂ. 2550.72 ಕೋಟಿ ಅಲ್ಪಾವಧಿ ಬೆಳೆ ಸಾಲ ಮತ್ತು 0.05 ಲಕ್ಷ ರೈತರಿಗೆ ರೂ.121.16 ಕೋಟಿ ಮಧ್ಯಮಾವಧಿ ದೀರ್ಘಾವಧಿ ಸಾಲ



ವಿತರಣೆ ಮಾಡಲಾಗಿದೆ. ರಾಜ್ಯದಲ್ಲಿ ಇಲ್ಲಿಯವರೆಗೆ ಸಹಕಾರ ಕ್ಷೇತ್ರದಲ್ಲಿ 2.5 ಲಕ್ಷ ಸ್ತ್ರೀಶಕ್ತಿ, ಸ್ವಸಹಾಯ ಗುಂಪುಗಳನ್ನು ರಚನೆ ಮಾಡಲಾಗಿದ್ದು, ಸುಮಾರು 32 ಲಕ್ಷ ಸದಸ್ಯರಿರುತ್ತಾರೆ. 2020–21ನೇ ಸಾಲಿನಲ್ಲಿ 0.34 ಲಕ್ಷ ಗುಂಪುಗಳಿಗೆ ರೂ. 1201.08 ಕೋಟಿ ಸಾಲ ವಿತರಿಸಲಾಗಿದ್ದು, 0.77 ಲಕ್ಷ ಗುಂಪುಗಳಿಂದ ರೂ.1633.59 ಕೋಟಿ ಹೊರ ಬಾಕಿ ಹೊಂದಿದ್ದು, ಗುರಿಗೆ ಎದುರಾಗಿ ಶೇ.100.14ರಷ್ಟು ಪ್ರಗತಿ ಸಾಧಿಸಲಾಗಿದೆ. 2021–22ನೇ ಸಾಲಿನಲ್ಲಿ 0.40 ಲಕ್ಷ ಗುಂಪುಗಳಿಗೆ ರೂ.1,400.00 ಕೋಟಿ ರೂ.ಗಳ ಸಾಲ ವಿತರಿಸುವ ಗುರಿ ಹೊಂದಲಾಗಿದೆ. ಮೇ ಅಂತ್ಯಕ್ಕೆ 6700 ಗುಂಪುಗಳಿಗೆ 233.33 ಕೋಟಿ ರೂ. ಸಾಲ ವಿತರಿಸಲಾಗಿದೆ ಎಂದು ವಿವರಿಸಿದರು.

**ಕೋವಿಡ್ ಬಗ್ಗೆ ಎಚ್ಚರ ವಹಿಸಿ :** ಪ್ರಧಾನಿ ನರೇಂದ್ರ ಮೋದಿಯವರ ಆಶೀರ್ವಾದದಿಂದ ಹತ್ತು ಹಲವು ಅಭಿವೃದ್ಧಿ ಕೆಲಸ ಮಾಡುತ್ತಿದ್ದೇವೆ. ಲಾಕ್‌ಡೌನ್ ಸಡಿಲಿಕೆ ಮಾಡಿದ್ದೇವೆ. ಹಾಗಂತಾ ಕೋವಿಡ್ ಹೋಗಿದೆ ಎನ್ನುವುದು ಬೇಡ. ಮಾಸ್ಕ್, ಸ್ಯಾನಿಟೈಸರ್, ಸಾಮಾಜಿಕ ಅಂತರ ಕಾಯ್ದುಕೊಂಡು ಕೋವಿಡ್ ನಿವಾರಿಸಲು ಸಹಕರಿಸಬೇಕು ಎಂದು ಮುಖ್ಯಮಂತ್ರಿಗಳು ಮನವಿ ಮಾಡಿದರು.

ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಮಾತನಾಡಿ, ಲಾಕ್‌ಡೌನ್ ಸಂದರ್ಭದಲ್ಲೂ ಸಾಲ ಕೊಡುವುದಕ್ಕೆ ತೊಂದರೆ ಆಗಬಾರದು ಎಂದು ಮುಖ್ಯಮಂತ್ರಿಯವರು ಆದೇಶ ನೀಡಿದ್ದರು. ಅದರಂತೆ ಕಳೆದ ಸಾಲಿನಲ್ಲಿ 24 ಲಕ್ಷ ರೈತರಿಗೆ 16,641 ಕೋಟಿ ರೂ. ಸಾಲ ನೀಡಿದ್ದೇವೆ ಎಂದರು.

ಡಿಸಿಸಿ ಬ್ಯಾಂಕ್‌ಗಳ ಮೂಲಕ ರೈತರಿಗೆ ಅನ್ಯಾಯ ಆಗಬಾರದು ಎಂದು ಸಿಎಂ ಆದೇಶ ನೀಡಿದ್ದರು. ಶಿವಮೊಗ್ಗ ಡಿಸಿಸಿ ಬ್ಯಾಂಕ್‌ನಲ್ಲಿ ಸಮಸ್ಯೆ ಆಗಿತ್ತು, ಅಧ್ಯಕ್ಷರನ್ನು ಬದಲಾಯಿಸಿದ್ದೇವೆ. ಇವತ್ತು ಎಲ್ಲ 21 ಡಿಸಿಸಿ ಬ್ಯಾಂಕ್‌ಗಳು ಲಾಭದಲ್ಲಿವೆ ಎಂದರು. ಪ್ರಸಕ್ತ ವರ್ಷ 30.26 ಲಕ್ಷ ರೈತರಿಗೆ ಸಾಲ ಕೊಡುವ ಗುರಿ ಇದೆ. ಇವತ್ತು ಸಿಎಂ ಯಡಿಯೂರಪ್ಪ ಸಾಂಕೇತಿಕವಾಗಿ ಚಾಲನೆ ನೀಡುತ್ತಿದ್ದಾರೆ. ನಂತರ ಫಲಾನುಭವಿಗಳಿಗೆ ಸಾಲ ನೀಡಲಾಗುತ್ತದೆ ಎಂದು ಹೇಳಿದರು.

ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರು ಮಾತನಾಡಿ, ಈ ಹಿಂದೆ ಡಿಸಿಸಿ ಬ್ಯಾಂಕಿನಿಂದ ಸಾಲ ಕೊಟ್ಟರೆ ವಸೂಲಾತಿಗೆ ವಾಹನಗಳನ್ನು ನೀಡಬೇಕಾಗಿತ್ತು. ಆದರೆ, ಈಗ ಲಕ್ಷಾಂತರ ಜನರು ಸಾಲ ಪಡೆದಿದ್ದು, ಶೇ.90 ಜನರು ಸಾಲ ವಾಪಸ್ ಮಾಡ್ತಿದ್ದಾರೆ. ಇದಕ್ಕೆ ಕಾರಣ ಅವಧಿ ಪೂರ್ವ ಸಾಲ ಮರುಪಾವತಿ ಮಾಡಿದರೆ ರಾಜ್ಯ ಸರ್ಕಾರ ಶೇ.4, ಕೇಂದ್ರ ಸರ್ಕಾರದಿಂದ ಪ್ರೋತ್ಸಾಹ ಧನ ನೀಡಲಾಗುತ್ತದೆ. ಇದರಿಂದ



ಸಾಲ ಮರುಪಾವತಿ ಉತ್ತಮವಾಗಿ ಆಗುತ್ತಿದೆ ಎಂದು ತಿಳಿಸಿದರು. ಕೇಂದ್ರ ಸರ್ಕಾರದ ಲಾಭದಾಯಕ ಯೋಜನೆಗಳಿಂದ ಜನರಿಗೆ ಅನುಕೂಲವಾಗುತ್ತಿದೆ. ಹೆಚ್ಚು ಎಥೆನಾಲ್ ಘಟಕಗಳ ಸ್ಥಾಪನೆಯಿಂದ ರೈತರಿಗೆ ಅನುಕೂಲ ಹಾಗೂ ಹೆಚ್ಚು ಲಾಭ ಆಗುತ್ತಿದೆ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರು ಸ್ವಾಗತಿಸಿದರು. ಕೊನೆಯಲ್ಲಿ ಸಹಕಾರ ಮಹಾಮಂಡಳದ ನಿರ್ದೇಶಕರು ಹಾಗೂ ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಹೆಚ್.ಎನ್. ಅಶೋಕ ಅವರು ವಂದನಾರ್ಪಣೆ ಸಲ್ಲಿಸಿದರು.

ವೇದಿಕೆಯ ಮೇಲೆ ಕಾರ್ಮಿಕ ಸಚಿವರಾದ ಎ. ಶಿವರಾಮ್ ಹೆಬ್ಬಾರ್, ವಿಧಾನ ಪರಿಷತ್ ಸದಸ್ಯರುಗಳಾದ ಅ. ದೇವೇಗೌಡ, ರಮೇಶ್‌ಕುಮಾರ್, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರಕುಮಾರ್, ಬೆಂಗಳೂರು ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಡಿ. ಹನುಮಂತಯ್ಯ, ಉಪಾಧ್ಯಕ್ಷರಾದ ಪಟ್ಟಾಭಿ ರಾಮಯ್ಯ, ಸಹಕಾರ ಸಂಘಗಳ ನಿಬಂಧಕರಾದ ಎಸ್. ಜಿಯಾವುಲ್ಲಾ ಉಪಸ್ಥಿತರಿದ್ದರು.

ಬಿಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರುಗಳು, ಸಹಕಾರ ಇಲಾಖೆಯ ಅಪರ ನಿಬಂಧಕರುಗಳಾದ ಕೆ.ಎಂ.ಆಶಾ, ಬಿ.ಸಿ.ಸತೀಶ್, ಎ.ಸಿ.ದಿವಾಕರ್, ವೈ.ಹೆಚ್.ಗೋಪಾಲಕೃಷ್ಣ, ಎಂ.ವೆಂಕಟಸ್ವಾಮಿ, ಜಂಟಿ ನಿಬಂಧಕರು ಗಳಾದ ಪಾಂಡುರಂಗ ಗರಗ್, ಅಶ್ವಥನಾರಾಯಣ, ಲಕ್ಷ್ಮೀಪತಯ್ಯ, ನಂಜುಂಡೇಗೌಡ, ಪ್ರಸಾದ್‌ರೆಡ್ಡಿ ಹಾಗೂ ಉಪನಿಬಂಧಕರುಗಳು ಭಾಗವಹಿಸಿದ್ದರು.

## ಶಿರಾ ಕನಕ ಪತ್ತಿನ ಸಹಕಾರ ಸಂಘದಿಂದ ಆಕ್ಸಿಜನ್ ಕಾನ್‌ಸೆಂಟ್ರೇಟರ್ ವಿತರಣೆ



**ಶಿರಾ :** ನಗರದ ಕನಕ ಪತ್ತಿನ ಸಹಕಾರ ಸಂಘದ ವತಿಯಿಂದ ಶಿರಾ ಸಾರ್ವಜನಿಕ ಆಸ್ಪತ್ರೆಗೆ 2 ಆಕ್ಸಿಜನ್ ಕಾನ್ಸಂಟ್ರೇಟರ್ ನೀಡಲಾಯಿತು. ಶಾಸಕರಾದ ಡಾ। ಸಿ.ಎಂ. ರಾಜೇಶ್‌ಗೌಡ, ಸಂಘದ ಅಧ್ಯಕ್ಷರಾದ ಎಸ್.ಡಿ. ರಂಗನಾಥ್, ನಿರ್ದೇಶಕರಾದ ಎಸ್.ಎಲ್. ರಂಗನಾಥ್, ಹೇಮಂತ್, ನಿಸರ್ಗ ಸುರೇಶ್, ಕನಕರಾಜ್, ಮಂಜುನಾಥ್, ನಿರ್ವಹಕರಾದ ಲಕ್ಷ್ಮಣ್ ಮತ್ತಿತರರು ಉಪಸ್ಥಿತರಿದ್ದರು.

## ಇಪಿಎಫ್ಒ ಖಾತೆಗೆ ಆಧಾರ್ ಜೋಡಣೆ : ಸೆಪ್ಟೆಂಬರ್ 1 ರವರೆಗೆ ಅವಕಾಶ

**ನವದೆಹಲಿ :** ಪಿಎಫ್ ಖಾತೆಗೆ ಆಧಾರ್ ಜೋಡಣೆಯನ್ನು ಕಡ್ಡಾಯ ಮಾಡುವುದನ್ನು ಕಾರ್ಮಿಕ ಭವಿಷ್ಯನಿಧಿ ಸಂಘಟನೆಯು (ಇಪಿಎಫ್ಒ) ಸೆಪ್ಟೆಂಬರ್ 1ರವರೆಗೂ ತಡೆ ಹಿಡಿದಿದೆ. ಇದರಿಂದಾಗಿ ಉದ್ಯೋಗದಾತರಿಗೆ ತಮ್ಮ ಉದ್ಯೋಗಿಗಳ ಆಧಾರ್ ಸಂಖ್ಯೆಯನ್ನು ಪಿಎಫ್ ಖಾತೆಗೆ ಜೋಡಿಸಲು ಹೆಚ್ಚಿನ ಕಾಲಾವಕಾಶ ಸಿಕ್ಕಿದೆ. ಇಪಿಎಫ್ಒ ಬಿಡುಗಡೆ ಮಾಡಿದ ಅಧಿಕೃತ ಸುತ್ತೋಲೆಯ ಪ್ರಕಾರ, ಯುಎಎನ್‌ನೊಂದಿಗೆ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡುವ ಕೊನೆಯ ದಿನಾಂಕವನ್ನು 2021ರ ಜೂನ್ 1ರಿಂದ 2021ರ ಸೆಪ್ಟೆಂಬರ್ 1 ರವರೆಗೆ ವಿಸ್ತರಿಸಲಾಗಿದೆ.



# ತುರ್ತು ಸಾಲ ಖಾತರಿ ಯೋಜನೆಗೆ ಹೆಚ್ಚುವರಿಯಾಗಿ ರೂ. 1.5 ಲಕ್ಷ ಕೋಟಿ ಮತ್ತೊಂದು ಸುತ್ತಿನ ಕೋವಿಡ್ ಪ್ಯಾಕೇಜ್ ಘೋಷಿಸಿದ ಕೇಂದ್ರ



**ನವದೆಹಲಿ** : ಅರ್ಥ ವ್ಯವಸ್ಥೆಯಲ್ಲಿ ಹೊಸ ಚೈತನ್ಯ ತರುವ ಉದ್ದೇಶದಿಂದ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮಗಳಿಗೆ ಸಾಲ ನೀಡಲು ಹೆಚ್ಚುವರಿಯಾಗಿ ರೂ. 1.5 ಲಕ್ಷ ಕೋಟಿ ನಿಗದಿ ಮಾಡಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಪ್ರಕಟಿಸಿದರು. ಅಲ್ಲದೆ, ಆರೋಗ್ಯಸೇವಾ ಕ್ಷೇತ್ರಕ್ಕೆ ಹೆಚ್ಚಿನ ಹಣಕಾಸಿನ ನೆರವು ಒದಗಿಸಲಾಗುವುದು, ಪ್ರವಾಸೋದ್ಯಮಕ್ಕೆ ಸಾಲದ ರೂಪದಲ್ಲಿ ಸಹಾಯ ಮಾಡಲಾಗುವುದು ಎಂದೂ ಅವರು ಪ್ರಕಟಿಸಿದರು. ಸೋಮವಾರ ಪ್ರಕಟಿಸಿದ ವಿವಿಧ ಕ್ರಮಗಳನ್ನು ಪರಿಗಣಿಸಿದರೆ, ಕೋವಿಡ್ ಸಾಂಕ್ರಾಮಿಕದಿಂದಾಗಿ ತೊಂದರೆಗೆ ಒಳಗಾಗಿರುವ ಅರ್ಥ ವ್ಯವಸ್ಥೆಯ ಪುನಶ್ಚೇತನಕ್ಕೆ ಕೇಂದ್ರ ಘೋಷಿಸಿರುವ ಆರ್ಥಿಕ ಪ್ಯಾಕೇಜ್‌ನ ಮೊತ್ತವು ರೂ.6.29 ಲಕ್ಷ ಕೋಟಿ ಆಗುತ್ತದೆ.

ಬಡವರಿಗೆ ನವೆಂಬರ್‌ವರೆಗೆ ಉಚಿತವಾಗಿ ಆಹಾರ ಧಾನ್ಯ ನೀಡಲು ಈ ಹಿಂದೆಯೇ ಘೋಷಿಸಿರುವ ರೂ.93 ಸಾವಿರ ಕೋಟಿ, ಆಹಾರ ಧಾನ್ಯ ನೀಡಲು ಸೋಮವಾರ ಘೋಷಿಸಿದ ಹೆಚ್ಚುವರಿ ರೂ. 14,775 ಕೋಟಿ ಹಾಗೂ ಹಣಕಾಸು ವಲಯವು ಕೋವಿಡ್‌ನಿಂದ ತೊಂದರೆಗೆ ಒಳಗಾಗಿರುವ ವಲಯಗಳಿಗೆ ಕೊಡುವ ಸಾಲಕ್ಕೆ ಖಾತರಿ ನೀಡಲು ನಿಗದಿ ಮಾಡಿರುವ ಮೊತ್ತ ಈ ಪ್ಯಾಕೇಜ್‌ನಲ್ಲಿ ಒಳಗೊಂಡಿದೆ.

ತುರ್ತು ಸಾಲ ಖಾತರಿ ಯೋಜನೆಯ ಮೊತ್ತವನ್ನು ಕೇಂದ್ರವು ರೂ. 4.5 ಲಕ್ಷ ಕೋಟಿಗೆ ಹೆಚ್ಚಿಸಿದೆ. ಇದರ ಮೊತ್ತ ರೂ.3 ಲಕ್ಷ ಕೋಟಿ ಆಗಿತ್ತು. ಈ ಯೋಜನೆಯ ಅಡಿಯಲ್ಲಿ ಸಣ್ಣ ಉದ್ದಿಮೆಗಳಿಗೆ ಅಡಮಾನ ಇಲ್ಲದೆಯೇ ಸಾಲ ನೀಡಲಾಗುತ್ತದೆ, ಸಾಲಕ್ಕೆ ಕೇಂದ್ರವು ಖಾತರಿದಾರ ಆಗಿರುತ್ತದೆ. ಕೋವಿಡ್‌ನಿಂದಾಗಿ ತೀವ್ರ ತೊಂದರೆ ಅನುಭವಿಸಿರುವ ವಲಯಗಳ ನೆರವಿಗಾಗಿ ರೂ.1.1 ಲಕ್ಷ ಕೋಟಿ ಮೊತ್ತದ ಸಾಲ ಖಾತರಿ ಯೋಜನೆಯನ್ನು ಕೂಡ ನಿರ್ಮಲಾ ಅವರು ಸೋಮವಾರ ಪ್ರಕಟಿಸಿದರು. ಈ ಯೋಜನೆಯ ಅಡಿಯಲ್ಲಿ ಆರೋಗ್ಯ ಸೇವಾ ವಲಯಕ್ಕಾಗಿ ರೂ.50 ಸಾವಿರ ಕೋಟಿ ನಿಗದಿ ಮಾಡಲಾಗಿದೆ.

ಕಿರು ಹಣಕಾಸು ಸಂಸ್ಥೆಗಳು ಒಟ್ಟು 25 ಲಕ್ಷ ಜನರಿಗೆ ಕಡಿಮೆ ಬಡ್ಡಿ ದರದಲ್ಲಿ ಗರಿಷ್ಠ ರೂ. 1.25 ಲಕ್ಷದವರೆಗೆ ಸಾಲ ವಿತರಣೆ ಮಾಡಲಿವೆ ಎಂದು ನಿರ್ಮಲಾ ಹೇಳಿದರು.

- **19,041 ಕೋಟಿ :** ಭಾರತ್‌ನೆಟ್‌ಯೋಜನೆಯ ಅಡಿಯಲ್ಲಿ ದೇಶದ ಎಲ್ಲ ಹಳ್ಳಿಗಳಿಗೆ ಬ್ರಾಡ್ ಬ್ಯಾಂಡ್ ಸಂಪರ್ಕ ಕಲ್ಪಿಸಲು ಸೋಮವಾರ ನಿಗದಿ ಮಾಡಿದ ಹೆಚ್ಚುವರಿ ಮೊತ್ತ. ಹೆಚ್ಚುವರಿ ಮೊತ್ತ ನಿಗದಿ ಮಾಡಿರುವ ಕಾರಣ, ಭಾರತ್ ನೆಟ್ ಯೋಜನೆಗಾಗಿ ವೆಚ್ಚ ಮಾಡುವ ಒಟ್ಟು ಮೊತ್ತವು ರೂ.61,109 ಕೋಟಿಗೆ ಹೆಚ್ಚಳವಾಗಲಿದೆ.
- **23,220 ಕೋಟಿ :** ಆಸ್ಪತ್ರೆಗಳಲ್ಲಿ ಮಕ್ಕಳಿಗೆ ಮೀಸಲಾದ ಹಾಸಿಗೆಗಳನ್ನು, ಆರೋಗ್ಯ ಸೌಲಭ್ಯಗಳನ್ನು ಸಿದ್ಧಪಡಿಸಲು ನೀಡುವುದಾಗಿ ಘೋಷಿಸಿರುವ ಮೊತ್ತ. ಈ ಮೊತ್ತವನ್ನು ಹಾಲಿ ಹಣಕಾಸು ವರ್ಷದಲ್ಲಿಯೇ ವೆಚ್ಚ ಮಾಡುವುದಾಗಿ ಸಚಿವೆ ಪ್ರಕಟಿಸಿದ್ದಾರೆ. ಈ ಮೊತ್ತವು ಆರೋಗ್ಯ ಸಚಿವಾಲಯಕ್ಕೆ ತಕ್ಷಣದಿಂದಲೇ ಲಭ್ಯವಾಗುವಂತೆ ಮಾಡಲಾಗಿದೆ.
- **14,775 ಕೋಟಿ :** ರೈತರಿಗೆ ಡಿಎಪಿ ಮತ್ತು ಇತರ ರಸಗೊಬ್ಬರ ಖರೀದಿಸಲು ಸಬ್ಸಿಡಿಗೆ ಹೆಚ್ಚುವರಿಯಾಗಿ ನೀಡಲಾಗುವ ಮೊತ್ತ.

### ಪ್ರವಾಸೋದ್ಯಮ ಕ್ಷೇತ್ರಕ್ಕೆ...

ಕೋವಿಡ್‌ನಿಂದಾಗಿ ತೊಂದರೆ ಅನುಭವಿಸಿರುವ ಪ್ರವಾಸೋದ್ಯಮ ಕ್ಷೇತ್ರದ ಏಜೆನ್ಸಿಗಳಿಗೆ ರೂ.10 ಲಕ್ಷದವರೆಗೆ ಸಾಲ ನೀಡಲಾಗುವುದು ಎಂದು ನಿರ್ಮಲಾ ಅವರು ಪ್ರಕಟಿಸಿದರು. ಅಲ್ಲದೆ, ಪ್ರವಾಸಿಗರಿಗೆ ಗೈಡ್ ಆಗಿ ಕೆಲಸ ಮಾಡುವವರಿಗೆ ರೂ. 1 ಲಕ್ಷದವರೆಗೆ ಸಾಲ ನೀಡಲಾಗುತ್ತದೆ ಎಂದೂ ಅವರು ಪ್ರಕಟಿಸಿದರು. ಕೋವಿಡ್‌ನಿರ್ಬಂಧಗಳು ತೆರವಾದ ನಂತರ ಭಾರತಕ್ಕೆ ಬರುವ ಮೊದಲ ಐದು ಲಕ್ಷ ಪ್ರವಾಸಿಗರಿಗೆ ಪ್ರವಾಸಿ ವೀಸಾ ಶುಲ್ಕ ವಿನಾಯಿತಿ ನೀಡಲಾಗುತ್ತದೆ. ವೀಸಾ ಶುಲ್ಕಕ್ಕೆ ವಿನಾಯಿತಿ ನೀಡುವುದರಿಂದ ಕೇಂದ್ರ ಸರ್ಕಾರಕ್ಕೆ ರೂ. 100 ಕೋಟಿ ವೆಚ್ಚವಾಗಲಿದೆ.

- ಉತ್ಪಾದನೆ ಆಧಾರಿತ ಉತ್ತೇಜನ ಯೋಜನೆಯನ್ನು ಬೃಹತ್ ಪ್ರಮಾಣದ ಎಲೆಕ್ಟ್ರಾನಿಕ್ಸ್‌ಉತ್ಪನ್ನ ತಯಾರಿಕೆ ವಲಯಕ್ಕೆ 2025–26ರವರೆಗೆ ವಿಸ್ತರಣೆ ಮಾಡಲಾಗಿದೆ.
- ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುವ ಉದ್ದೇಶದ ಆತ್ಮನಿರ್ಭರ ಭಾರತ ರೋಜಗಾರ್ ಯೋಜನೆಯನ್ನು ಮುಂದಿನ ವರ್ಷದ ಮಾರ್ಚ್ 31ರವರೆಗೆ ವಿಸ್ತರಿಸಲಾಗುತ್ತದೆ. ಈ ವರ್ಷದ ಜೂನ್ 18ರವರೆಗೆ ಈ ಯೋಜನೆಯ ಅಡಿಯಲ್ಲಿ ಒಟ್ಟು 21.42 ಲಕ್ಷ ಜನ ಪ್ರಯೋಜನ ಪಡೆದಿದ್ದಾರೆ.

ಸಾಂಕ್ರಾಮಿಕದಿಂದಾಗಿ ತೊಂದರೆಗೆ ಒಳಗಾದ ವಲಯಗಳಿಗೆ ನೆರವಾಗುವತ್ತ ಗಮನ ನೀಡಿರುವ ಹೊಸ ಕ್ರಮಗಳೂ ಇದರಲ್ಲಿ ಇವೆ, ಹಳೆಯ ಯೋಜನೆಗಳ ಮುಂದುವರಿಕೆಯೂ ಇದೆ. ಹಾಗೆಯೇ, ಈಚೆಗೆ ಮಾಡಿದ್ದ ಕೆಲವು ಘೋಷಣೆಗಳನ್ನು ಪುನರುಚ್ಚರಿಸಲಾಗಿದೆ.

**– ಅದಿತಿ ನಾಯರ್,**
**ಐಸಿಆರ್‌ಎ ಸಂಸ್ಥೆಯ**
**ಮುಖ್ಯ ಅರ್ಥಶಾಸ್ತ್ರಜ್ಞೆ**



## ಆತ್ಮೀಯ ಅಭಿನಂದನೆ : ಶುಭ ಕೋರಿಕೆ



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಆಡಳಿತಮಂಡಳಿಗೆ ಇತ್ತೀಚೆಗೆ ಚುನಾವಣೆ ನಡೆದಿದ್ದು ಪತ್ತಿನ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾದ ಡಾ. ಬಿ.ಡಿ.ಭೂಕಾಂತ, ನಿರ್ದೇಶಕರಾದ ಡಾ.ಶೇಖರ ಗೌಡ ಮಾಲಿಪಾಟೀಲ ಅವರುಗಳು ಸಹಕಾರ ಮಹಾಮಂಡಳದ ನಿರ್ದೇಶಕರುಗಳಾಗಿ ಚುನಾಯಿತರಾಗಿದ್ದಾರೆ.

ದಿನಾಂಕ : 23.06.2021ರಂದು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತಮಂಡಳಿ ಸಭೆಯಲ್ಲಿ ಡಾ. ಬಿ.ಡಿ. ಭೂಕಾಂತರವರು ಮತ್ತು ಡಾ. ಶೇಖರಗೌಡ ಮಾಲಿ ಪಾಟೀಲ ಅವರುಗಳನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತ ಜಿ.ಟಿ.ದೇವೇಗೌಡ ಅವರು ಮತ್ತು ಆಡಳಿತಮಂಡಳಿ ನಿರ್ದೇಶಕರುಗಳು ಆತ್ಮೀಯವಾಗಿ ಅಭಿನಂದಿಸಿ ಶುಭ ಕೋರಿದರು.

## ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದಿಂದ ಕೋವಿಡ್ ವಿಶೇಷ ಚಿನ್ನಾಭರಣ ಸಾಲ : ವಾರ್ಷಿಕ ಶೇ.4ರ ಬಡ್ಡಿದರದಲ್ಲಿ

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ) ಮಂಗಳೂರು ಇದರ ಸದಸ್ಯ ಗ್ರಾಹಕರಿಗೆ ಕೊರೊನಾ 2ನೇ ಅಲೆಯ ಆರ್ಥಿಕ ಹಿನ್ನೆಡೆಯಲ್ಲಿ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ನೀಡುವ ವಿಶೇಷ ಚಿನ್ನಾಭರಣ ಸಾಲ ಯೋಜನೆಗೆ ದಕ್ಷಿಣ ಕನ್ನಡ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಪ್ರವೀಣ್ ನಾಯಕ್ ಇವರು ಸಂಘದ ಪ್ರಧಾನ ಕಛೇರಿಯಲ್ಲಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕಳೆದ ವರ್ಷ ಕೊರೊನಾ ಮಹಾಮಾರಿಯ ಸಂದರ್ಭದಲ್ಲಿ ಕೇವಲ 3 ತಿಂಗಳ ಅವಧಿಯಲ್ಲಿ ರೂಪಾಯಿ 40 ಕೋಟಿಗೂ ಮಿಕ್ಕಿ ಚಿನ್ನಾಭರಣ ಸಾಲ ನೀಡಿ ಸಹಕಾರಿ ರಂಗದ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಶ್ಲಾಘಿಸಿದರು.

ಸಂಘದ ಅಧ್ಯಕ್ಷರಾದ ಚಿತ್ತರಂಜನ್ ಬೋಳಾರ್ ಮಾತನಾಡಿ ಕೊರೊನಾ 2ನೇ ಅಲೆಯಿಂದ ಲಾಕ್‌ಡೌನ್‌ನ ಈ ಪರಿಸ್ಥಿತಿಯಲ್ಲಿ ವ್ಯಾಪಾರ ಹಾಗೂ ಕೆಲಸವು ಇಲ್ಲದೆ ಜನರ ಆರ್ಥಿಕ ಸ್ಥಿತಿಗತಿಯು ತುಂಬಾ ಹದೆಗಟ್ಟಿದ್ದು, ಜೊತೆಗೆ ಮಳೆಗಾಲವು ಆರಂಭವಾಗಿರುವುದರಿಂದ ಆರ್ಥಿಕ ಸ್ಥಿತಿಯು ಇನ್ನಷ್ಟು ಕುಗ್ಗಿ ಹೋಗಿದೆ. ಜನರು ಅವರ ಮಕ್ಕಳ ಶಿಕ್ಷಣ ವೆಚ್ಚವನ್ನು ಭರಿಸಲು ಹಾಗೂ ವ್ಯಾಪಾರದಲ್ಲಿ ಪುನಃ ಬಂಡವಾಳ ತೊಡಗಿಸಲು ಪರದಾಡುವ ಈ ಪರಿಸ್ಥಿತಿಯಲ್ಲಿ ಸಾಲದ ಮೇಲಿನ ಬಡ್ಡಿಯನ್ನು ಭರಿಸುವುದು ಕಷ್ಟಕರವಾಗಿದ್ದು, ಜನರಿಗೆ ಸ್ಪಂದಿಸುವ ನಿಟ್ಟಿನಲ್ಲಿ ನಮ್ಮ ಸಂಘವು ಶೇ.4 ರ ಬಡ್ಡಿದರದಲ್ಲಿ ಗ್ರಾಹಕ ಸ್ನೇಹಿ ಸಾಲ ಯೋಜನೆಯ ಮೂಲಕ ಒಂದು ಲಕ್ಷ ರೂಪಾಯಿ ಸಾಲಕ್ಕೆ ಕೇವಲ 333/– ರೂಪಾಯಿ ತಿಂಗಳ ಬಡ್ಡಿ ಪಾವತಿಸುವ ಚಿನ್ನಾಭರಣ ಸಾಲ ಯೋಜನೆಯು ಉಪಯುಕ್ತವಾಗಲಿದೆ. ಹೆಚ್ಚಿನ ಜನರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕೆಂದು ವಿನಂತಿಸಿದರು.



# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ನೂತನ ಕಟ್ಟಡ ನಿರ್ಮಾಣಕ್ಕೆ ಸಹಕಾರ ಸಚಿವರಿಂದ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತ ಕಚೇರಿಯ ನೂತನ ಕಟ್ಟಡ ನಿರ್ಮಾಣದ ಶಂಕುಸ್ಥಾಪನೆಯನ್ನು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ನೆರವೇರಿಸಿ, ಪತ್ತಿನ ಮಹಾಮಂಡಳದ ಅಭಿವೃದ್ಧಿಗೆ ಎಲ್ಲಾ ರೀತಿಯ ಸಹಕಾರ, ನೆರವು ನೀಡುವುದಾಗಿ ಭರವಸೆ ನೀಡಿದರು.

ದಿನಾಂಕ : 1.7.2021 ರಂದು ಪತ್ತಿನ ಮಹಾಮಂಡಳವು ನಗರದ ನಂದಿನಿ ಲೇಔಟ್‌ನ ರಾಜೀವ್‌ಗಾಂಧಿನಗರದಲ್ಲಿ ಹೊಂದಿರುವ ನಿವೇಶನದಲ್ಲಿ ಶಂಕುಸ್ಥಾಪನೆಯನ್ನು ಸಹಕಾರ ಸಚಿವರು ನೇರವೇರಿಸಿದ ಸಂದರ್ಭದಲ್ಲಿ ಅಬಕಾರಿ ಸಚಿವ ಕೆ. ಗೋಪಾಲಯ್ಯ ರವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು, ಪತ್ತಿನ ಮಹಾಮಂಡಳದ ಭವಿಷ್ಯದ ಯೋಜನೆಗಳಿಗೆ ಶುಭಕೋರಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಜಿ.ಟಿ. ದೇವೇಗೌಡ, ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಲಲಿತಾ ಜಿ.ಟಿ. ದೇವೇಗೌಡ ಅವರುಗಳು ಭೂಮಿ ಪೂಜೆ ನೆರವೇರಿಸಿದರು.

ನಂತರ ಜಿ.ಟಿ. ದೇವೇಗೌಡರು ಮಾತನಾಡಿ ಪತ್ತಿನ ಸಹಕಾರ





# ಸಂಘಗಳ ಮಹಾಮಂಡಳದ
# ಶಂಕುಸ್ಥಾಪನೆ – ಗಣ್ಯರಿಂದ ಶುಭಹಾರೈಕೆ

ಮಹಾಮಂಡಳದ ಕಾರ್ಯಚಟುವಟಿಕೆಗಳಿಗೆ ಪೂರಕವಾಗಿ ಸ್ವಂತ ಸುಸಜ್ಜಿತ ಆಡಳಿತ ಕಛೇರಿ ಅವಶ್ಯವಿದ್ದು, ಸಹಕಾರ ಚಳವಳಿಯ ಪೂರಕ ಬೆಳವಣಿಗೆಗೆ ನೆರವಾಗಲಿದೆ ಎಂದು ತಿಳಿಸಿ ಪತ್ತಿನ ಮಹಾಮಂಡಳದ ಯೋಜನೆಗಳಿಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಡಾ. ಬಿ.ಡಿ. ಭೂಕಾಂತ, ನಿರ್ದೇಶಕರುಗಳಾದ ಸಿ.ಎಂ.ಮಾರೇಗೌಡ, ವಿ.ರಾಜು, ಡಾ|| ಸಂಜಯ್ ಪಿ. ಹೊಸಮಠ, ಎಂ.ಜೆ. ನರೇಂದ್ರ ಕುಮಾರ, ಡಿ. ಚನ್ನಯ್ಯ, ಕೆ. ಕೃಷ್ಣಮೂರ್ತಿ, ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ, ಜಿ. ಮಲ್ಲಿಕಾರ್ಜುನಯ್ಯ, ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ, ಧರೇಪ್ಪ ಎಂ.ಅಲಗೂರ, ಗುರುಪಾದಪ್ಪಗೌಡ ಬ. ಪಾಟೀಲ್, ಹೊನ್ನಯ್ಯ ವಿ. ಹಿರೇಮಠ, ಪಿ.ಕೆ. ಜಯಕೃಷ್ಣೇಗೌಡ, ಹೆಚ್.ಟಿ. ನಾಗೇಶ್, ಶೇಖರಗೌಡ ಮಾಲಿಪಾಟೀಲ, ಡಿ.ಆರ್. ನಾಗೇಶಪ್ಪ, ಉಮೇಶ ಶಿ ಬಾಳಿ, ರವೀಂದ್ರ ಕಲಬುರ್ಗಿ, ಚಿತ್ತರಂಜನ್ ಬೋಳಾರ್, ಸಲಹೆಗಾರರಾದ ಕೆ.ಎಸ್. ಗುರುಪ್ರಸಾದ್ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ) ಆಶಾಲತಾ.ಪಿ ರವರುಗಳು ಉಪಸ್ಥಿತರಿದ್ದರು.





# ಅಂತರರಾಷ್ಟ್ರೀಯ ಸಹಕಾರ ದಿನಾಚರಣೆ – ಮಹತ್ವ (ಜುಲೈನ ಮೊದಲ ಶನಿವಾರ, 3ನೇ ಜುಲೈ 2021)

▸▸ **ಶಶಿಧರ ಎಲೆ,** ಸಹಕಾರ ಸಂಘಗಳ ಅಪರ ನಿಬಂಧಕರು (ನಿ)

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯು (International Cooperative Alliance ICA) 1923 ರಿಂದ ಪ್ರತಿವರ್ಷ ಜುಲೈ ತಿಂಗಳ ಮೊದಲ ಶನಿವಾರವನ್ನು 'ಅಂತರರಾಷ್ಟ್ರೀಯ ಸಹಕಾರ ದಿನ"ವನ್ನಾಗಿ ಆಚರಿಸುತ್ತಿದೆ. ವಿಶ್ವಸಂಸ್ಥೆಯು ಇದನ್ನು ಪರಿಗಣಿಸಿ 1995 ರಿಂದ ಇದೇ ದಿನವನ್ನು 'ಅಂತರರಾಷ್ಟ್ರೀಯ ಸಹಕಾರ ದಿನ'ವನ್ನಾಗಿ ಅಂಗೀಕರಿಸಿ ಘೋಷಣೆ ಮಾಡಿತು. ಈ ವರ್ಷದ ಆಚರಣೆಯು 99ನೆಯದು ಮತ್ತು ವಿಶ್ವಸಂಸ್ಥೆ ಅಂಗೀಕೃತ ದಿನವಾಗಿ 27ನೆಯದಾಗಿದೆ. ಅದು 3ನೇ ಜುಲೈ 2021.

ಪ್ರತಿವರ್ಷ ಒಂದು ವಿಷಯಧಾರಿತವಾಗಿ 'ಘೋಷವಾಕ್ಯ'ವನ್ನು ನಿರ್ಧರಿಸಲಾಗುತ್ತದೆ. 2015 ರಿಂದ ವಿಶ್ವ ಸಂಸ್ಥೆಯ 2030ರ "ಸುಸ್ಥಿರ ಅಭಿವೃದ್ಧಿ ಗುರಿ" (Sustainable Development Goal - SDG) ಆಧರಿಸಿ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO-ವಿಶ್ವಸಂಸ್ಥೆಯ ಅಂಗ) ಸಹಯೋಗದೊಂದಿಗೆ ಈ ಗುರಿ ಸಾಧಿಸಲು ಕೈಜೋಡಿಸಿದೆ. ಈ ವರ್ಷ ಎಸ್.ಡಿ.ಜಿ ಗುರಿ–13, "ಹವಾಮಾನ–ಹವಾಮಾನ ವೈಪರಿತ್ಯ ಮತ್ತು ಅದರ ಪರಿಣಾಮಗಳ ನಿಯಂತ್ರಣಕ್ಕೆ ತಕ್ಷಣ ಕ್ರಮಗಳು" ಇದರ ಆಧಾರಿತವಾಗಿ "ಒಟ್ಟಿಗೆ ಉತ್ತಮ ಪುನರ್ ನಿರ್ಮಾಣ (Rebuild better together) ಎಂಬ ಘೋಷಣೆಯನ್ನು ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ ಮಾಡಿದೆ.

ಸಹಕಾರ ಎಂಬುದು ಒಂದು 'ಶಕ್ತಿ'. ವಿಶ್ವದ 3 ದಶ ಲಕ್ಷ ಸಹಕಾರ ಸಂಘಗಳು ವಿಶ್ವದ ಮಾನವ ಶಕ್ತಿಯ ಶೇ. 12 ರಷ್ಟನ್ನು ಆವರಿಸಿಕೊಂಡಿದೆ. 30 ದಶಲಕ್ಷ ನೌಕರರಿಗೆ ನೇರ ಉದ್ಯೋಗ ಒದಗಿಸಿದ್ದು ಪರೋಕ್ಷವಾಗಿ ಒಂದು ನೂರು ಕೋಟಿ ಸದಸ್ಯರಿಗೆ ಅವರ ಕುಟುಂಬಗಳಿಗೆ ಜೀವಾಳವಾಗಿರುತ್ತದೆ. ಇದರೊಡನೆ ಸಹಕಾರದ ಮಾರ್ಗ 'ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ಬೆಳವಣಿಗೆ' ಇದರ ಗುರಿ, 'ಎಲ್ಲರನ್ನು ಒಳಗೊಂಡಂತಹ ಅಭಿವೃದ್ಧಿ' ಇದರ ವ್ಯಾಪ್ತಿ 'ಗಡಿಯೇ ಇಲ್ಲದ ವಿಶ್ವ'. ನಿಜ ಅರ್ಥದಲ್ಲಿ 'ವಸುದೈವಕುಟುಂಬಕಂ' ಹೀಗಿರುವಾಗ ಸುಸ್ಥಿರ ಅಬಿವೃದ್ಧಿಗೆ 'ಸಹಕಾರ'ವೇ ನೆಲೆಯಲ್ಲವೇ? ವಿಶ್ವಸಂಸ್ಥೆಯು ವಿಶ್ವದ ಸುಸ್ಥಿರ ಅಭಿವೃದ್ಧಿಗೆ 2030 ರೊಳಗೆ ಸಂಘಟಿಸಬೇಕೆಂದು 16 ಗುರಿಗಳನ್ನು 2015 ರಲ್ಲಿ ನಿಗದಿಪಡಿಸಿದೆ. ಈ ಗುರಿಗಳನ್ನು ಪ್ರತ್ಯೇಕ ಕೋಷ್ಟಕ (ಅನುಬಂಧ)ದಲ್ಲಿ ಒದಗಿಸಿದೆ.

ಈ ಹಿಂದಿನ ಅಂತರರಾಷ್ಟ್ರೀಯ ಸಹಕಾರ ದಿನಗಳಲ್ಲಿ ಹಲವು ಗುರಿಗಳಿಗೆ ಸಂಬಂಧಿಸಿದಂತೆ ಘೋಷಣೆಯನ್ನು ಮಾಡಲಾಗಿದೆ. ಈ ವರ್ಷ ಗುರಿ–13ನ್ನು ಘೋಷವಾಕ್ಯಕ್ಕಾಗಿ ಪರಿಗಣಿಸಿದೆ. ವರ್ಷವಾರು



ಋತುಗಳಲ್ಲಿ ಆಗುತ್ತಿರುವ ಹವಾಮಾನ ಬದಲಾವಣೆಗಳು, ಕರಗುತ್ತಿರುವ ಹಿಮಗಡ್ಡೆಗಳು, ಅದರಿಂದ ಆಗುತ್ತಿರುವ ಪ್ರಪಾತಗಳು, ಮೇಘ ಸ್ಫೋಟಗಳು, ಮಳೆಗಾಲದಲ್ಲಿ (ಮುಂಗಾರು–ಹಿಂಗಾರು) ಆಗುತ್ತಿರುವ ವ್ಯತ್ಯಯಗಳನ್ನು ನಾವು ಗಮನಿಸುತ್ತಿರುತ್ತೇವೆ. ಈ ಹವಾಮಾನ ಬದಲಾವಣೆಗಳು ಕೃಷಿ ಪ್ರಧಾನವಾದ ನಮ್ಮ ಮತ್ತು ಹಲವಾರು ರಾಷ್ಟ್ರಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಕೃಷಿ ಪದ್ಧತಿಯನ್ನೇ ಬದಲಾಯಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದರಿಂದ ಆಹಾರ ಉತ್ಪಾದನೆ, ಇದರ ಅವಲಂಭಿತ ಕೈಗಾರಿಕೆ ಮತ್ತು ಸರಪಳಿ ಕ್ರಿಯೆಯಾಗಿ ಇತರೆ ಅನೇಕ ವಲಯಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. "ಆಹಾರ ಭದ್ರತೆ"ಗೆ ಚ್ಯುತಿಯಾಗುತ್ತಿದೆ ಎಂಬುದು ಆತಂಕಕಾರಿ ಬೆಳವಣಿಗೆ.

ಇದಕ್ಕೆ ಕಾರಣವಾದರೂ ಏನು? ಎಂದು ಪರಿಶೀಲಿಸಿದಲ್ಲಿ ಕಂಡುಬರುವ ಅಂಶವೆಂದರೆ 'ಪ್ರಕೃತಿಯೊಡನೆ ಮಾನವ ವರ್ತಿಸುತ್ತಿರುವ ರೀತಿಯೇ ಆಗಿದೆ' ಎಂದರೆ ತಪ್ಪಾಗಲಾರದು. ಮಾನವ "ಅಭಿವೃದ್ಧಿ" ಎಂದು ಅರ್ಥೈಸಿರುವುದು ತನ್ನ ಜೀವನಮಟ್ಟ ಉತ್ತಮಗೊಳಿಸುವುದು. ಉತ್ತಮಗೊಳ್ಳಲು ಅನುಸರಿಸಿದ ಮಾರ್ಗ ವಿಜ್ಞಾನ ಮತ್ತು ತಂತ್ರಜ್ಞಾನ.

ಇದು 'ಎರೆಡು ಅಲುಗಿನ ಕತ್ತಿ' ಯಂತೆ. ಇದರ ಎಲ್ಲೆಯಿಲ್ಲದ ಮುಂದುವರಿಕೆ. 'ಪ್ರಕೃತಿ' ಮೇಲಿನ ನಿರಂತರ 'ಅತ್ಯಾಚಾರ'. ಇದರ ಪರಿಣಾಮವೇ ವಿಶ್ವದ ತಾಪಮಾನ ಏರಿಕೆ. ಈ ಏರಿಕೆ 2 ಡಿಗ್ರಿ ಸೆಲ್ಸಿಯಸ್ ಆದಲ್ಲಿ ಹಲವು ಭೂಪ್ರದೇಶಗಳ ಮೇಲೆ ವ್ಯತಿರಿಕ್ತ ಪರಿಣಾಮಗಳಾಗಿ ಜೀವಿಸಲು ಯೋಗ್ಯಲಾರದಾಗುತ್ತದೆ. ಆಗುವ ನಷ್ಟ

**ಸಹಕಾರ ಎಂಬುದು ಒಂದು 'ಶಕ್ತಿ'. ವಿಶ್ವದ 3 ದಶ ಲಕ್ಷ ಸಹಕಾರ ಸಂಘಗಳು ವಿಶ್ವದ ಮಾನವ ಶಕ್ತಿಯ ಶೇ. 12 ರಷ್ಟನ್ನು ಆವರಿಸಿಕೊಂಡಿದೆ. 30 ದಶಲಕ್ಷ ನೌಕರರಿಗೆ ನೇರ ಉದ್ಯೋಗ ಒದಗಿಸಿದ್ದು ಪರೋಕ್ಷವಾಗಿ ಒಂದು ನೂರು ಕೋಟಿ ಸದಸ್ಯರಿಗೆ ಅವರ ಕುಟುಂಬಗಳಿಗೆ ಜೀವಾಳವಾಗಿರುತ್ತದೆ. ಇದರೊಡನೆ ಸಹಕಾರದ ಮಾರ್ಗ 'ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ಬೆಳವಣಿಗೆ' ಇದರ ಗುರಿ, 'ಎಲ್ಲರನ್ನು ಒಳಗೊಂಡಂತಹ ಅಭಿವೃದ್ಧಿ' ಇದರ ವ್ಯಾಪ್ತಿ 'ಗಡಿಯೇ ಇಲ್ಲದ ವಿಶ್ವ'.**



ಊಹಿಸಲಸದಳ. ಆದುದರಿಂದ 2015ರಲ್ಲಿ ಪ್ಯಾರಿಸ್ ಶೃಂಗ ಸಭೆಯಲ್ಲಿ ಆದ ಒಪ್ಪಂದದಂತೆ ಏರಿಕೆಯ ಪ್ರಮಾಣವನ್ನು 1.50 ಸೆಲ್ಸಿಯಸ್ ಒಳಗೆ ನಿಯಂತ್ರಿಸುವುದು. ಇದಕ್ಕೆ ಅಗತ್ಯ ಕ್ರಮಕೈಗೊಳ್ಳಲು ಈ ರಾಷ್ಟ್ರಗಳು ಕಟಿಬದ್ಧವಾಗಿವೆ. ಭಾರತವು ಈ ಒಪ್ಪಂದ ಭಾಗವಾಗಿದೆ. ಇದರಲ್ಲಿ ಎರಡು ಅಂಶಗಳು ಒಂದು ಮತ್ತೊಂದಕ್ಕೆ ಪೂರಕವಾಗಿದೆ. ಮೊದಲನೆಯದು 'ಇಂಗಾಲ ಹೊರಸೂಸುವಿಕೆ'ಯನ್ನು ಕಡಿತಗೊಳಿಸುವುದು. ಎರಡನೆಯದು 'ನವೀಕರಣಗೊಳ್ಳಬಲ್ಲ (ಅಕ್ಷಯ) ಶಕ್ತಿ ಉತ್ಪಾದನೆ'ಯನ್ನು ಹೆಚ್ಚಳಗೊಳಿಸುವುದು. ಪಳೆಯುಳಿಕೆ (Fossil) ಇಂಧನವಾದ ತೈಲ ಮತ್ತು ಕಲ್ಲಿದ್ದಲು ಆಧಾರಿತ ಶಕ್ತಿಮೂಲ ಮತ್ತು ಕೈಗಾರಿಕೆ ಸಾಗಾಣಿಕೆಯಲ್ಲಿ ಅದರ ಉಪಯೋಗವನ್ನು ಕಡಿತಗೊಳಿಸುವುದು. ಪರ್ಯಾಯವಾಗಿ ಅಕ್ಷಯ ಇಂಧನಗಳಾದ ಸೌರಶಕ್ತಿ, ಪವನ (ಗಾಳಿ) ಆಧಾರಿತ ಶಕ್ತಿ ಮೂಲಗಳ ಬಳಕೆಯನ್ನು ಪ್ರೋತ್ಸಾಹಿಸುವುದು.

ಭಾರತವು ಕಳೆದ ದಶಕದಲ್ಲಿ ಈ ಮೂಲಗಳ ಶಕ್ತಿಯನ್ನು ನಾಲ್ಕರಷ್ಟು ವೃದ್ಧಿಸಿದೆ. 2030ಕ್ಕೆ 450ಗೆ ವ್ಯಾ.ಗುರಿ ಹೊಂದಿದ್ದು ಸಾಧಿಸುವುದು ಬಹಳಷ್ಟಿದೆ. ಏಕೆಂದರೆ ಈಗಿರುವ ಏರಿಕೆ ದರದಲ್ಲಿಯೇ ಆದಲ್ಲಿ 2030ಕ್ಕೆ ವಿಶ್ವತಾಪಮಾನ ಏರಿಕೆ ಪ್ರಮಾಣ 2.40 ಸೆ. ಆಗುತ್ತದೆ ಎಂಬುದು ಒಂದು ಅಂದಾಜು.

ಹವಾಮಾನ ವೈಪರೀತ್ಯಗಳನ್ನು ತಡೆಗಟ್ಟುವ ಮೂಲಕ ವಿಶ್ವದ ಸುಸ್ಥಿರ ಬೆಳವಣಿಗೆಗೆ 'ಸಹಕಾರ'ವು ಸಮುದಾಯ, ಸರ್ಕಾರದೊಟ್ಟಿಗೆ ಕೈಜೋಡಿಸಿ ಕಾರ್ಯನಿರ್ವಹಿಸುವ ಜವಾಬ್ದಾರಿ ಇದೆ. ಈ ದಿಸೆಯಲ್ಲಿ ಸಹಕಾರ ಸಂಘಗಳು ಪಳೆಯುಳಿಕೆ ಇಂಧನ ಬಳಕೆಯನ್ನು ಕಡಿಮೆಗೊಳಿಸಬೇಕು. ಸದಸ್ಯರಲ್ಲಿ, ಸಾರ್ವಜನಿಕರಲ್ಲಿ ಇದರ ಬಗ್ಗೆ ಸದಭಿಪ್ರಾಯ ಮೂಡಿಸುವುದು. (ಉದಾ : ಬೈಸಿಕಲ್ ಬಳಕೆಗೆ ಪ್ರೋತ್ಸಾಹಿಸುವುದು, ಉತ್ತೇಜಿಸುವುದು, ಪಾರಿತೋಷಕ ನೀಡುವುದು) ವಿದ್ಯುಚ್ಛಕ್ತಿ ವಾಹನಗಳ ಬಳಕೆ, ಸೌರಶಕ್ತಿ ಉತ್ಪಾದನೆಗೆ ಅಗತ್ಯ ಪರಿಕರಗಳನ್ನು ಅಳವಡಿಸಿಕೊಳ್ಳುವುದು. 'ಓಝೋನ್' ಪದರದ ಚದುರುವಿಕೆಗೆ ಕಾರಣವಾದ ರಾಸಾಯನಿಕಗಳು (ಕ್ಲೋರೋಫ್ಲೋರೋ ಕಾರ್ಬನ್), ಶುಚಿತ್ವಕ್ಕಾಗಿ ಬಳಸುವ ರಾಸಾಯನಿಕ ಪದಾರ್ಥಗಳನ್ನು ಕಡಿತಗೊಳಿಸುವುದು, ಅರಣ್ಯನಾಶ ತಡೆಗಟ್ಟುವಿಕೆ, ವೈವಿಧ್ಯಮಯ ಗಿಡ, ಮರಗಳನ್ನು ನೆಟ್ಟು, ಬೆಳೆಸಿ, ಪೋಷಿಸಿ ಜೈವವೈವಿಧ್ಯಮತೆಯನ್ನು ಪುನರ್ ನಿರ್ಮಾಣ ಮಾಡುವುದು. ಒಟ್ಟಾರೆ ಇಂಗಾಲ ಹೊರಸೂಸುವಿಕೆ ಕಡಿತಗೊಳಿಸುವುದು, ನವೀಕರಣಗೊಳಿಸುವುದು, ನವೀಕರಣ (ಅಕ್ಷಯ) ಇಂಧನ ಬಳಕೆ ಹೆಚ್ಚಿಸುವುದು ಒಟ್ಟಾರೆಯಾಗಿ 'ಪರಿಸರ ಸ್ನೇಹಿ' ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು, ಇಂತಹ ಯೋಜನೆಗಳಲ್ಲಿ (ಜೈವಿಕ ಡೀಸೆಲ್, ಎಥೆನಾಲ್) ಹೂಡಿಕೆ ಮಾಡುವುದು. ಸಹಕಾರ ಪತ್ತು ವಲಯವು ಹೂಡಿಕೆ ಮತ್ತು ದುಡಿಯುವ ಬಂಡವಾಳ ಒದಗಿಸುವ 'ಉತ್ಪನ್ನ'ಗಳಿಗೆ ಆದ್ಯತೆ ನೀಡುವುದು ಈ ದಿಸೆಯಲ್ಲಿ ಸಕಾರಾತ್ಮಕ ಕ್ರಮವಾಗುತ್ತದೆ.

ಭಾರತವು ವಿಶ್ವಸಂಸ್ಥೆಯ 193 ಸದಸ್ಯ ರಾಷ್ಟ್ರಗಳಲ್ಲಿ 'ಸುಸ್ಥಿರ ಅಭಿವೃದ್ಧಿ ಗುರಿ – (SDG)' ಸಾಧನೆಯಲ್ಲಿ 115ನೇ ಸ್ಥಾನದಲ್ಲಿದ್ದದ್ದು 117ನೇ ಸ್ಥಾನಕ್ಕೆ ಕುಸಿದಿದೆ. 'ಪರಿಸರ ಸಾಧನೆ ಸೂಚ್ಯಂಕ'ದಲ್ಲಿ 180 ದೇಶಗಳ ಪೈಕಿ 168ನೇ ಸ್ಥಾನದಲ್ಲಿದೆ. ಇದು ಅತ್ಯಂತ ಕಳವಳಕಾರಿ ಅಂಶವಾಗಿದೆ. ಸಹಕಾರ ಚಳವಳಿ ತನ್ನ 'ಸಾಮಾಜಿಕ ಬದ್ಧತೆ' ಅಂಗವಾಗಿ 'ಅಂತರರಾಷ್ಟ್ರೀಯ ಸಹಕಾರ ದಿನ' ದಂದು "ಒಟ್ಟಿಗೆ ಉತ್ತಮ ಪುನರ್ ನಿರ್ಮಾಣ" ಮಾಡೋಣ ಎಂಬ ಪ್ರತಿಜ್ಞೆ ಸ್ವೀಕಾರ ಮಾಡುವುದರೊಂದಿಗೆ ಹಲವು ಪರಿಸರ ಸ್ನೇಹಿ ಕಾರ್ಯಕ್ರಮಗಳೊಂದಿಗೆ ರಾಷ್ಟ್ರ ಮತ್ತು ವಿಶ್ವದ ಸುಸ್ಥಿರ ಅಭಿವೃದ್ಧಿಯ ಪಾಲುದಾರರಾಗಿ ಶ್ರಮಿಸೋಣ.

ಸವಿನುಡಿಯ ಸಿರಿಗುಡಿಯ
ಕಟ್ಟುವವರು ನಾವು
ಹೊಂಗನಸುಗಳು ಮುಡಿಯ
ಮುಟ್ಟುವವರು ನಾವು

– ಕುವೆಂಪು

# ಅನುಬಂಧ

## ಸುಸ್ಥಿರ ಬೆಳವಣಿಗೆ ಗುರಿಗಳು (Sustainable development Goals - SDG)

| | |
|---|---|
| ಎಸ್.ಡಿ.ಜಿ.–1 | ಬಡತನ ನಿರ್ಮೂಲನೆ – ಯಾವ ಸ್ವರೂಪದಲ್ಲಿಯೂ ಬಡತನವಿರಬಾರದು. ಸಮಸ್ತ ನಾಗರೀಕರಿಗೂ ಸಾಮಾಜಿಕ ಭದ್ರತೆ ಇರಬೇಕು. |
| ಎಸ್.ಡಿ.ಜಿ.–2 | ಶೂನ್ಯ ಹಸಿವು – ಹಸಿವಿನಿಂದ ಯಾರೂ ಬಳಲಬಾರದು. ಎಲ್ಲರಿಗೂ ಆಹಾರ ಭದ್ರತೆ ಇರಬೇಕು. ಪೌಷ್ಠಿಕಾಂಶಯುಕ್ತ ಆಹಾರ ದೊರೆಯಬೇಕು. ಸುಸ್ಥಿರ ಕೃಷಿ ನೀತಿಗೆ ಉತ್ತೇಜನ. |
| ಎಸ್.ಡಿ.ಜಿ.–3 | ಉತ್ತಮ ಆರೋಗ್ಯ – ಎಲ್ಲರಿಗೂ ಉತ್ತಮ ವೈದ್ಯಕೀಯ ಸೌಲಭ್ಯ ದೊರೆಯಬೇಕು. ಎಲ್ಲ ವಯಸ್ಸಿನವರು, ವರ್ಗದವರ ಆರೋಗ್ಯ ಉತ್ತಮ ಸ್ಥಿತಿಯಲ್ಲಿ ಇರಬೇಕು. |
| ಎಸ್.ಡಿ.ಜಿ.–4 | ಗುಣಮಟ್ಟದ ಶಿಕ್ಷಣ – ಎಲ್ಲರನ್ನು ಒಳಗೊಂಡ ಶಿಕ್ಷಣ ನೀತಿ, ಜೀವನ ನಿರ್ವಹಣೆಗೆ ಅವಕಾಶಗಳನ್ನು ಒದಗಿಸುವಂತಹ ಗುಣಮಟ್ಟದ ಶಿಕ್ಷಣ ನೀತಿ. |
| ಎಸ್.ಡಿ.ಜಿ.–5 | ಲಿಂಗ ಸಮಾನತೆ – ಲಿಂಗ ಸಮಾನತೆ ಎಲ್ಲೆಡೆ ಸಾಧ್ಯವಾಗಬೇಕು. ಮಹಿಳೆಯರು ಮತ್ತು ಬಾಲಕಿಯರ ಸಬಲೀಕರಣ. |
| ಎಸ್.ಡಿ.ಜಿ.–6 | ಶುದ್ಧ ನೀರು ಮತ್ತು ಶುಚಿತ್ವ – ಎಲ್ಲರಿಗೂ ಶುದ್ಧ ನೀರಿನ ನಿರಂತರ ಲಭ್ಯತೆ ಮತ್ತು ಶುಚಿತ್ವ ನಿರ್ವಹಣೆಗೆ ಅಗತ್ಯ ಸೌಲಭ್ಯ. |
| ಎಸ್.ಡಿ.ಜಿ.–7 | ಕೈಗೆಟುಕುವ ಶುದ್ಧ ಇಂಧನ – ಎಲ್ಲರಿಗೂ ಕೈಗೆಟುಕುವ ಬೆಲೆಯಲ್ಲಿ ಪರಿಸರ ಸ್ನೇಹಿ ಇಂಧನ ದೊರೆಯಬೇಕು. |
| ಎಸ್.ಡಿ.ಜಿ.–8 | ಗುಣಮಟ್ಟದ ಕೆಲಸ ಮತ್ತು ಆರ್ಥಿಕ ಬೆಳವಣಿಗೆ – ಎಲ್ಲರಿಗೂ ಉತ್ತಮ ಗುಣಮಟ್ಟದ ಕೆಲಸ ದೊರೆಯಬೇಕು. ಎಲ್ಲರನ್ನೂ ಒಳಗೊಳ್ಳುವ ಮತ್ತು ಸುಸ್ಥಿರ ಆರ್ಥಿ ಬೆಳವಣಿಗೆ |
| ಎಸ್.ಡಿ.ಜಿ.–9 | ಕೈಗಾರಿಕೆ, ಅನ್ವೇಷಣೆ, ಮೂಲಸೌರ್ಕ – ಎಲ್ಲರನ್ನು ಒಳಗೊಂಡ ಮತ್ತು ಸುಸ್ಥಿರ ಕೈಗಾರಿಕಾ ಅಭಿವೃದ್ಧಿ |
| ಎಸ್.ಡಿ.ಜಿ.–10 | ಅಸಮಾನತೆ ನಿರ್ಮೂಲನೆ – ಜನರು /ಜಿಲ್ಲೆಗಳು /ರಾಜ್ಯಗಳು /ದೇಶಗಳ ನಡುವಣ ಅಸಮಾನತೆ ನಿರ್ಮೂಲನೆ. |
| ಎಸ್.ಡಿ.ಜಿ.–11 | ಸುಸ್ಥಿರ ನಗರ ಮತ್ತು ಸಮುದಾಯಗಳು – ಜನ ವಸತಿ ಪ್ರದೇಶಗಳು ಸುರಕ್ಷಿತ ಮತ್ತು ಸುಸ್ಥಿರವಾಗಿರಬೇಕು. |
| ಎಸ್.ಡಿ.ಜಿ.–12 | ಹೊಣೆಯಾಧಾರಿತ ಬಳಕೆ ಮತ್ತು ಉತ್ಪಾದನೆ – ಎಲ್ಲಾ ಸರಕು ಮತ್ತು ಸೇವೆಗಳ ಸುಸ್ಥಿರವಾದ ಉತ್ಪಾದನಾ ನೀತಿ ಮತ್ತು ಜವಾಬ್ದಾರಿಯುತ ಬಳಕೆ ಉತ್ತೇಜನ. |
| ಎಸ್.ಡಿ.ಜಿ.–13 | ಹವಾಮಾನ – ಹವಾಮಾನ ವೈಪರೀತ್ಯ ಮತ್ತು ಅದರ ಪರಿಣಾಮಗಳ ನಿಯಂತ್ರಣಕ್ಕೆ ತಕ್ಷಣದ ಕ್ರಮಗಳು. |
| ಎಸ್.ಡಿ.ಜಿ.–14 | ಜಲಚರ ಜೀವಿಗಳು – ಜಲಚರ ಜೀವಿಗಳ ಸಂರಕ್ಷಣೆ ಮತ್ತು ಸಮುದ್ರದ ಸಂಪನ್ಮೂಲಗಳ ಸುಸ್ಥಿರ ಬಳಕೆ |
| ಎಸ್.ಡಿ.ಜಿ.–15 | ನೆಲಜೀವಿಗಳು – ಪರಿಸರ ಸಂರಕ್ಷಣೆ, ಜೀವ ವೈವಿಧ್ಯ ಸಂರಕ್ಷಣೆ |
| ಎಸ್.ಡಿ.ಜಿ.–16 | ಶಾಂತಿ, ನ್ಯಾಯ ಮತ್ತು ಪ್ರಬಲ ಸಂಸ್ಥೆಗಳು – ಸಮುದಾಯಗಳಲ್ಲಿ ಶಾಂತಿಯನ್ನು ಉತ್ತೇಜಿಸಬೇಕು. ಎಲ್ಲರಿಗೂ ನ್ಯಾಯ ಕೈಗೆಟುಕಬೇಕು. |



# ಪತ್ರಿಕಾ ದಿನಾಚರಣೆ ಮತ್ತು ತಾಂತ್ರಿಕವಾಗಿ ಬದಲಾದ ಇಂದಿನ ಪತ್ರಿಕೋದ್ಯಮ




▸▸ ಮಂಜುನಾಥ್ ನಾಯ್ಕ್, ಹಿರಿಯ ಪತ್ರಕರ್ತರು, ಬೆಂಗಳೂರು.

### ಕನ್ನಡ ಪತ್ರಿಕೋದ್ಯಮದ ಕಿರು ಪರಿಚಯ

ಪ್ರತಿ ವರ್ಷ ಜುಲೈ 1: ಕರ್ನಾಟಕದಲ್ಲಿ 'ಪತ್ರಿಕಾ ದಿನ'

ಇಂದು ಪತ್ರಿಕೋದ್ಯಮವೆಂಬುದು ಕಾಲದ ಸ್ಥಿತ್ಯಂತರದಲ್ಲಿ ಹಲವು ಬದಲಾವಣೆಗಳನ್ನು ಕಂಡಿದೆ. ಪತ್ರಿಕೋದ್ಯಮದ ರೀತಿ, ಸ್ವರೂಪ ಬದಲಾಗಿದೆ. ಮುದ್ರಣ ಮಾಧ್ಯಮದ ಜಾಗವನ್ನು ಬಹುಪಾಲು ಆನ್‌ಲೈನ್ ಪತ್ರಿಕೆಗಳು ಆಕ್ರಮಿಸಿಕೊಳ್ಳುತ್ತಿವೆ. ಸಾಮಾಜಿಕ ಜಾಲ ತಾಣಗಳು ಕೂಡ ಸುದ್ದಿಗಳನ್ನು ಸೆಕೆಂಡು, ಸೆಕೆಂಡಿಗೂ ಹೊತ್ತು ತರುತ್ತಿವೆ. ಎಲೆಕ್ಟ್ರಾನಿಕ್ ಮಾಧ್ಯಮಗಳು ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡು ತಾಂತ್ರಿಕವಾಗಿ ಹೆಚ್ಚು ಸಮೃದ್ಧವಾಗುತ್ತಿವೆ. ಇಂದು ಸುದ್ದಿ ತಿಳಿಯಬೇಕೆಂದರೆ ಬಹುಪಾಲು ಮಂದಿ ಪತ್ರಿಕೆಯನ್ನು ಹಿಡಿದುಕೊಂಡು ಕೂರುವುದಿಲ್ಲ. ಕೈಯಲ್ಲಿ ಸ್ಮಾರ್ಟ್ ಫೋನ್, ಟ್ಯಾಬ್ ಇದ್ದರೆ ಸಾಕು, ಇಂಟರ್ನೆಟ್ ಸಂಪರ್ಕವಿದ್ದರೆ ಜಗತ್ತಿನ ಯಾವ ಭಾಗದ ವಿಷಯವನ್ನು ಕೂಡ ಅಂಗೈಯಲ್ಲಿ ಹಿಡಿದುಕೊಂಡು ನೋಡಬಹುದು ಎಂಬಂತಾಗಿದೆ. ತಂತ್ರಜ್ಞಾನದ ಬೆಳವಣಿಗೆ ಸುದ್ದಿ ಮಾಧ್ಯಮದ ಅಪಾರ ಪರಿಣಾಮ ಬೀರಿದೆ.

ಆದರೂ ಕೂಡ ಪತ್ರಿಕೆಗಳನ್ನು ಹಿಡಿದುಕೊಂಡು ಅಕ್ಷರಗಳನ್ನು ಓದುವುದೆಂದರೆ ಅದರ ಮಜಾನೇ ಬೇರೆ, ಕಾಗದದ ಸ್ಪರ್ಶ ಹಿತಾನುಭವ ನೀಡುತ್ತದೆ, ಅದು ಆನ್‌ಲೈನ್ ಮಾಧ್ಯಮದಲ್ಲಿ ಸಿಗಲಾರದು ಎಂದು ಹೇಳುವವರು ಈಗಲೂ ಇದ್ದಾರೆ. ಪತ್ರಿಕೋದ್ಯಮ, ಪತ್ರಿಕಾ ಸಾಹಿತ್ಯಕ್ಕೆ ಭದ್ರ ತಳಪಾಯ ಪತ್ರಿಕೆಗಳು ಎಂದರೆ ಅತಿಶಯೋಕ್ತಿಯೆನಿಸಲಾರದು.

ಜರ್ಮನಿಯ ಜಾನ್ ಗುಟೆನ್‌ಬರ್ಗ್ 1440ರಲ್ಲಿ ಎರಕಹೊಯ್ದ ಅಚ್ಚುಮೊಳೆ ತಯಾರಿಸಿ, ಪವಿತ್ರ ಗ್ರಂಥ 'ದಿ ಬೈಬಲ್' ಅನ್ನು ದಪ್ಪನೆಯ ಹಾಳೆಯ ಮೇಲೆ ಮುದ್ರಿಸಿದಾಗ, ಅದೊಂದು ಕ್ರಾಂತಿಕಾರಕ ಆವಿಷ್ಕಾರವಾಗಿತ್ತು. ಮುದ್ರಣ ಜ್ಞಾನದ ದಾಹ ತಣಿಸುವ ಪ್ರಮುಖ ಸೆಲೆಯಾಯಿತು. ನಾಗರಿಕತೆಯ ಬೆಳವಣಿಗೆಯಲ್ಲಿ ಅತ್ಯಂತ ನಿರ್ಣಾಯಕ ಪಾತ್ರವಹಿಸಿದ ಹಲವೇ ಸಾಧನೆಗಳಲ್ಲಿ ಮುದ್ರಣಯಂತ್ರ ಸಹ ಒಂದು ಎಂದು ಆಧುನಿಕ ಇತಿಹಾಸಕಾರರು ಹೇಳುತ್ತಾರೆ.

ಜರ್ಮನ್‌ನ ಮತಪ್ರಚಾರಕ ಹೆರ್ಮನ್ ಪ್ರೆಢರಿಕ್ ಮೊಗ್ಲಿಂಗ್ ಕನ್ನಡ ಪತ್ರಿಕೋದ್ಯಮದ ಮೂಲಪುರುಷ ಎಂದು ಕರೆಯಲಾಗುತ್ತದೆ. ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ'. ಮೊಗ್ಲಿಂಗ್ ಹುಬ್ಬಳ್ಳಿ ಹಾಗೂ ಗದಗದಲ್ಲಿಯೂ ಕೆಲವು ಕಾಲ ಕಾರ್ಯನಿರ್ವಹಿಸಿದ್ದ. ಆಗ ಆ ಭಾಗವು ಧಾರವಾಡ ಜಿಲ್ಲೆಗೆ ಸೇರಿತ್ತು. ಮೊಗ್ಲಿಂಗ್ ಧಾರವಾಡ ಜಿಲ್ಲೆಯಿಂದ ಮಂಗಳೂರಿಗೆ ಬಂದು 1838ರಿಂದ 1852ರವರೆಗೆ ಸೇವೆಸಲ್ಲಿಸಿದ. ಈ ಅವಧಿಯಲ್ಲಿ ಆತ ಕೈಗೊಂಡ ಪ್ರಮುಖ ನಿರ್ಧಾರವೆಂದರೆ ಪತ್ರಿಕೆಯೊಂದನ್ನು ಪ್ರಕಟಿಸಿ, ಜನರಿಗೆ ಮಾಹಿತಿ ಒದಗಿಸುವುದು. 1843ರ ಜುಲೈ 1ರಂದು "ಮಂಗಳೂರು ಸಮಾಚಾರ" ಎಂಬ ಪತ್ರಿಕೆಯನ್ನು ಹೊರತಂದ. ಇದು ಕನ್ನಡಿಗರನ್ನು ಒಂದುಗೂಡಿಸುವಲ್ಲಿ ಸಹಕಾರಿಯಾಯಿತು. ಆ ಕಾರಣದಿಂದ ಜುಲೈ 1ರಂದು ಕರ್ನಾಟಕದಲ್ಲಿ ಪತ್ರಿಕಾ ದಿನಾಚರಣೆಯಾಗಿ ಆಚರಿಸಲಾಗುತ್ತದೆ. ಮಂಗಳೂರಿನಲ್ಲಿ ಕನ್ನಡ ಪತ್ರಿಕೋದ್ಯಮದ ಪ್ರಾರಂಭ ಬಾಸೆಲ್ ಮಿಶನ್ ಸಂಸ್ಥೆಯಿಂದ ನಡೆಯಿತು. 'ಮಂಗಳೂರು ಸಮಾಚಾರ' ವೆಂಬ ಹೆಸರಿನಲ್ಲಿ ಪ್ರಾರಂಭಗೊಂಡ ಕನ್ನಡ ವಾರ ಪತ್ರಿಕೆಯಿಂದ ಕನ್ನಡ ಪತ್ರಿಕೋದ್ಯಮ ಚರಿತ್ರೆ ಕರ್ನಾಟಕದಲ್ಲಿ ಆರಂಭವಾಗುತ್ತದೆ. ಪಾಶ್ಚಾತ್ಯ ಪ್ರಪಂಚದಲ್ಲಿ ಜನಜೀವನದ ಮೇಲೆ ಮುದ್ರಣದ ಪ್ರಭಾವವು ಮೂರು ನಾಲ್ಕು ಶತಮಾನಗಳಿಂದ ಉಂಟಾಗಿದ್ದರೂ ನಮ್ಮಲ್ಲಿ ಈ ವ್ಯವಸ್ಥೆ ಒಂದೂವರೆ ಶತಮಾನದ ಈಚಿನದು. ಈ ಸೌಲಭ್ಯವನ್ನು ಒದಗಿಸಿಕೊಟ್ಟವರು ಪಾಶ್ಚಾತ್ಯರು. ಕ್ರೈಸ್ತ ಮತ ಪ್ರಚಾರಕ್ಕಾಗಿ ಬಂದ ಇವರು ಮೊದಲು ಇಲ್ಲಿ ಕಲ್ಲಚ್ಚಿನ ಮುದ್ರಣವನ್ನು ಬೆಳಕಿಗೆ ತಂದರು. ತದನಂತರ ಅಚ್ಚುಮೊಳೆಗಳ ಮುದ್ರಣವೂ ಆರಂಭವಾಯಿತು.

### ಬದಲಾದ ಪತ್ರಿಕೋದ್ಯಮದ ಸ್ವರೂಪ

ವಿದ್ಯುನ್ಮಾನ ಮತ್ತು ಇಂಟರ್ನೆಟ್ ಕ್ರಾಂತಿಯಿಂದ ಪತ್ರಿಕೋದ್ಯಮದ ಸ್ವರೂಪ ಸಂಪೂರ್ಣವಾಗಿ ಬದಲಾಗಿದೆ. ಅಲ್ಲದೆ ಪತ್ರಿಕೋದ್ಯಮದ ವ್ಯಾಪ್ತಿ, ವಿಶಾಲತೆಯು ಹೆಚ್ಚಾಗಿದೆ. ಹಲವಾರು ವರ್ಷಗಳಿಂದ ಮುದ್ರಣ ಮಾಧ್ಯಮವನ್ನೇ ನೆಚ್ಚಿಕೊಂಡ ಪತ್ರಿಕೋದ್ಯಮ ಕಾಲಾಂತರದಲ್ಲಿ ಆಕಾಶವಾಣಿ, ವಿದ್ಯುನ್ಮಾನ ದೃಶ್ಯ ಮಾಧ್ಯಮಗಳಿಗೆ ವಿಸ್ತರಿಸುವ ಮೂಲಕ ಇನ್ನಷ್ಟು ವೈವಿಧ್ಯಮಯ ಸ್ವರೂಪ ಪಡೆಯುವಂತಾಯಿತು.

ಬಂಡವಾಳಶಾಹಿಗಳ ಪ್ರವೇಶದಿಂದ ವಿದ್ಯುನ್ಮಾನ ಮಾಧ್ಯಮ ಪತ್ರಿಕೋದ್ಯಮಕ್ಕೆ ಒಂದು ರೀತಿಯಲ್ಲಿ ಕಾರ್ಪೊರೇಟ್ ಸಂಸ್ಕೃತಿ ಬಂದಿತು. ಇದರಿಂದಾಗಿ ಕ್ಷಣ ಕ್ಷಣದ ಸುದ್ದಿಗಳನ್ನು ನೀಡಲು 24 ಗಂಟೆಗಳ ನಿರಂತರ ಸುದ್ದಿವಾಹಿನಿಗಳು ಜನಪ್ರಿಯವಾಗ ತೊಡಗಿದವು, 24 ಗಂಟೆಗಳ ಸುದ್ದಿವಾಹಿನಿಗಳು ಲೈವ್ ಸುದ್ದಿಗಳನ್ನೇ ನೀಡುವುದರ ಕಡೆ ಹೆಚ್ಚು ಗಮನ ಹರಿಸುವುದರಿಂದ ಸುದ್ದಿಗಳಿಗಾಗಿ ದಿನಗಟ್ಟಳೆ ಕಾಯುವ ಪರಿಪಾಟಲು ತಪ್ಪಿತು. ಸುದ್ದಿವಾಹಿಗಳು ಲೈವ್ ಹಾಗೂ ವೇಗವಾಗಿ




ಸುದ್ದಿ ನೀಡುವ ಬರದಲ್ಲಿ ಹಸಿ ಬಿಸಿ ಸುಳ್ಳು ಸುದ್ದಿಗಳ ಜೊತೆಗೆ ಅಧಿಕೃತವಲ್ಲದ ಸುದ್ದಿಗಳನ್ನು ನೀಡಿದ ಹಲವಾರು ಉದಾಹರಣೆಗಳಿವೆ. ಬ್ರೇಕಿಂಗ್ ನ್ಯೂಸ್ ನೀಡುವ ಬರದಲ್ಲಿ ಸುಳ್ಳು ಹಾಗೂ ತಪ್ಪು ಸುದ್ದಿಗಳನ್ನು ನೀಡಿ ನಗೆಪಾಟಲಿಗೆ ಈಡಾದ ಉದಾಹರಣೆಗಳಿವೆ. ಅಪರಾಧ, ಸಿನೆಮಾ ಹಾಗೂ ಸೆಕ್ಸ್ ಆಧಾರಿತ ಸುದ್ದಿಗಳಿಗೆ ಹಾಗೂ ಖಾಸಗಿ ಸುದ್ದಿಗಳನ್ನು ಪ್ರಸಾರ ಮಾಡಲು ವಿದ್ಯುನ್ಮಾನ ಮಾಧ್ಯಮಗಳು ಹೆಚ್ಚು ಒತ್ತು ನೀಡುವುದರಿಂದ ಸಂಪ್ರದಾಯಸ್ಥರು ಹಾಗೂ ಸಮಾಜದ ಸ್ವಾಸ್ಥ್ಯದ ಬಗ್ಗೆ ಕಾಳಜಿ ಇರುವವರು ಟಿವಿ ಮಾಧ್ಯಮಗಳ ಸುದ್ದಿಯೆಂದರೆ ಮೂಗು ಮುರಿಯುವಂತಾಯಿತು.

ಈ ನಡುವೆ ಟಿವಿ ವಾಹಿನಿಗಳು ರಹಸ್ಯ ಕಾರ್ಯಾಚರಣೆ ನಡೆಸಿ ಪ್ರಸಾರ ಮಾಡಿದ ರಾಜಕೀಯ ನಾಯಕರ ಮತ್ತು ಸರ್ಕಾರದ ಮಟ್ಟದ ಹಗರಣಗಳ ಸುದ್ದಿಗಳಿಂದ ಹಲವಾರು ರಾಜಕೀಯ ನಾಯಕರ ತಲೆದಂಡವಾಗುವುದರೊಂದಿಗೆ ಸರ್ಕಾರಗಳು ಪತನವಾದ ಉದಾಹರಣೆಗಳಿವೆ. ಆದಾಯಕ್ಕಾಗಿ ಜಾಹಿರಾತು ಮೂಲವನ್ನೇ ನಂಬಿದ ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳು ಕಾರ್ಪೊರೇಟ್ ಜಗತ್ತಿನ ಹಲವಾರು ಹುಳುಕುಗಳನ್ನು ಹಗರಣಗಳನ್ನು ಬಹಿರಂಗಪಡಿಸದೆ ರಾಜೀಮಾಡಿಕೊಂಡ ನೂರಾರು ಉದಾಹರಣೆಗಳು ಇವೆ. ಒಟ್ಟಾರೆಯಾಗಿ ಇಂದು ವಿದ್ಯುನ್ಮಾನ ಹಾಗೂ ಮುದ್ರಣ ಮಾಧ್ಯಮಗಳು ಸಂಪೂರ್ಣವಾಗಿ ಕಾರ್ಪೊರೇಟ್ ಕಪಿಮುಷ್ಠಿಯಲ್ಲಿದ್ದು, ವೃತ್ತಿಪರ ಪತ್ರಿಕೋದ್ಯಮಕ್ಕೆ ಅವಕಾಶವಿಲ್ಲ. ಬಂಡವಾಳ ಹೂಡಿದ ಮಾಲಿಕನ ಹಿತ ಕಾಪಾಡಲು ಮೊದಲ ಆದ್ಯತೆ ನೀಡಲಾಗುತ್ತದೆ.


### ಇಂಟರ್‌ನೆಟ್ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳು

ಇಂಟರ್ನೆಟ್ ಕ್ರಾಂತಿಯಿಂದ ವೆಬ್‌ಸೈಟ್‌ಗಳು, ವೆಬ್ ಮಿಡಿಯಾಗಳು, ಡಿಜಿಟಲ್ ಮಿಡಿಯಾ ಹಾಗೂ ಸಾಮಾಜಿಕ ಜಾಲತಾಣಗಳು ಪರ್ಯಾಯ ಪತ್ರಿಕೋದ್ಯಮವಾಗಿ ಬೆಳೆದಿದೆ. ಅತಿ ಚಿಕ್ಕ ಬಂಡವಾಳದಲ್ಲಿ ಸಮಾನ ಮನಸ್ಕ ಯುವಕ ಯುವತಿಯರು ತಂಡ ಕಟ್ಟಿಕೊಂಡು ವೆಬ್ ಸೈಟ್, ಯೂಟ್ಯೂಬ್ ಚಾನಲ್ ಹಾಗೂ ಡಿಜಿಟಲ್ ಮಿಡಿಯಾಗಳನ್ನು ಆರಂಭಿಸಿ ಒಂದೊಂದು ವಿಷಯ ಹಾಗೂ ಪ್ರದೇಶಗಳಿಗೆ ಸಂಬಂಧಿಸಿದ ಸುದ್ದಿಗಳನ್ನು ಹಾಗೂ ಬೆಳವಣಿಗೆಗಳನ್ನು ಪ್ರಸಾರ ಮಾಡುವುದು ಸಾಮನ್ಯವಾಗಿದೆ ಇದಕ್ಕಾಗಿ ಯೂಟ್ಯೂಬ್, ಫೇಸ್ ಬುಕ್, ಟ್ವಿಟರ್ ಹಾಗೂ ಇನ್ ಸ್ಟಾಗ್ರಾಂ ನಂತಹ ಸಾಮಾಜಿಕ ಜಾಲತಾಣಗಳನ್ನು ವೇದಿಕೆಯಾಗಿ ಬಳಸಿಕೊಳ್ಳುತ್ತಿದ್ದಾರೆ. ಈ ರೀತಿಯ ಪತ್ರಿಕೋದ್ಯಮದಲ್ಲಿ ಜಗತ್ತಿನ ಕೋಟ್ಯಂತರ ಮಂದಿ ತೊಡಗಿಸಿಕೊಂಡಿದ್ದು ಇದು ಈ ಕಾಲದ ಅತ್ಯಂತ ಪ್ರಭಾವಿ ಮಾಧ್ಯಮವಾಗಿ ಹೊರಹೊಮ್ಮಿದೆ. ಯೂಟ್ಯೂಬ್ ಮತ್ತು ಫೇಸ್‌ಬುಕ್ ಸಾಮಾಜಿಕ ಜಾಲತಾಣಗಳು ತಮ್ಮಲ್ಲಿ ಅಪ್‌ಲೋಡ್ ಆದ ವಿಡಿಯೋಗಳ ವೀಕ್ಷಣೆ ಮಾಡಿದ ಸಂಖ್ಯೆಗೆ ಆಧಾರವಾಗಿ ಜಾಹಿರಾತುಗಳನ್ನು ಬಿಡುಗಡೆ ಮಾಡಿ ಆದಾಯದ ಒಂದು ಭಾಗವನ್ನು ಯೂಟ್ಯೂಬ್‌ನಲ್ಲಿ ವಿಡಿಯೋ ಅಪ್‌ಲೋಡ್ ಮಾಡಿದವರಿಗೂ ಹಂಚುತ್ತವೆ. ಸ್ವತಂತ್ರ ಪತ್ರಿಕೋದ್ಯಮ ಮಾಡುವವರಿಗೆ ಇದು ಒಂದು ರೀತಿಯಲ್ಲಿ ಆದಾಯದ ಮೂಲವಾಗಿದೆ. ಮುದ್ರಣ, ವಿದ್ಯುನ್ಮಾನ, ಡಿಜಿಟಲ್, ಸೋಷಿಯಲ್ ಮಿಡಿಯಾ, ವೆಬ್ ಮಿಡಿಯಾ ಸಹಿತ ಇಂದು ಪತ್ರಿಕೋದ್ಯಮದ ವ್ಯಾಪ್ತಿ ಅತ್ಯಂತ ವಿಶಾಲವಾಗಿದ್ದು ಆಕಾಶವೇ ಮಿತಿ ಎಂಬ ಹೆಗ್ಗಳಿಕೆ ಪಾತ್ರವಾಗಿದೆ.

### ಪತ್ರಕರ್ತರಿಗೆ ನಿರಂತರ ಕಾಡುವ ಅಸ್ಥಿರತೆ

ಜಗತ್ತಿನಲ್ಲಿ ಅತ್ಯಂತ ಅಸ್ಥಿರ ಹಾಗೂ ಅಭದ್ರತೆಯ ಉದ್ಯೋಗಳಲ್ಲಿ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮ ಕ್ಷೇತ್ರದ ಉದ್ಯೋಗಗಳು ಮೊದಲ ಸ್ಥಾನದಲ್ಲಿವೆ. ಮಾಧ್ಯಮ ಖಾಸಗಿ ವಲಯದ ಪ್ರಮುಖ ಕ್ಷೇತ್ರವಾಗಿರುವುದರಿಂದ ಪತ್ರಕರ್ತರು ಹಾಗೂ ಮಾಧ್ಯಮ ಪ್ರತಿನಿಧಿಗಳ ಕೆಲಸ ಸದಾಕಾಲ ಅಭದ್ರತೆ ಹಾಗೂ ಅಸುರಕ್ಷತೆಯಿಂದ ಕೂಡಿದೆ. ಪತ್ರಕರ್ತರು ಜೀವವನ್ನು ಅಪಾಯಕ್ಕೆವೊಡ್ಡಿ ಕೆಲಸಮಾಡುವುದರ ಜೊತೆಗೆ ಮಾಲಿಕರ ಅಥವಾ ರಾಜಕಾರಣಿಗಳ ಕೆಂಗಣ್ಣಿಗೆ ಗುರಿಯಾಗಿ ಕೆಲಸ ಕಳೆದುಕೊಳ್ಳುವ ಅಪಾಯವು ಹೆಚ್ಚಾಗಿದೆ. ಸರ್ಕಾರ ಮತ್ತು ಪ್ರಮುಖ ಹಗರಣಗಳನ್ನು ಬಯಲಿಗೆಳೆದ ನೂರಾರು ಪತ್ರಕರ್ತರು ಸಮಾಜಘಾತುಕ ಶಕ್ತಿಗಳಿಂದ ಹಲ್ಲೆ ಮತ್ತು ಕೊಲೆಯಾದ ಉದಾಹರಣೆಗಳಿದ್ದು, ಈ ರೀತಿ ಅಹಿತಕರ ಘಟನೆಗಳು ಭಾರತ ಸಹಿತ ಜಗತ್ತಿನ ನಾನಾ ಭಾಗಗಳಲ್ಲಿ ನಿರಂತವಾಗಿ ನಡೆಯುತ್ತವೆ. ಇಲ್ಲವೆ ದೇಶದ್ರೋಹದ ಸುಳ್ಳು ಆರೋಪ ಹೊರಿಸಿ ಬಂಧಿಸಲಾಗುತ್ತದೆ. ಅಥವಾ ಕೆಲಸದಿಂದ ತೆಗೆಯಲಾಗುತ್ತದೆ. ಈ ರೀತಿಯ ಘಟನೆಗಳು ಎಗ್ಗಿಲ್ಲದೆ ನಡೆಯತ್ತವೆ. ಆದರೂ ಸಹ ವೃತ್ತಿ ಪರ ಪತ್ರಕರ್ತರು ಇದರ ಬಗ್ಗೆ ತಲೆ ಕೆಡಿಸಿಕೊಳ್ಳದೆ ಪ್ರಾಮಾಣಿಕವಾಗಿ ತಮ್ಮ ಕರ್ತವ್ಯ ಮಾಡುವ ಮೂಲಕ ಪತ್ರಿಕೋದ್ಯಮಕ್ಕೆ ಘನತೆ ಗೌರವ ತಂದಿದ್ದಾರೆ. ಕೊರೋನಾದಂತಹ ಮಾರಕ ಸಾಂಕ್ರಾಮಿಕದ ಸಮಯದಲ್ಲಿ ಜೀವವನ್ನು ಅಪಾಯಕ್ಕೊಡ್ಡಿ ಸುದ್ದಿ ಮಾಡುವ ಬರದಲ್ಲಿ ಜಗತ್ತಿನಾದ್ಯಂತ ನೂರಾರು ಮಂದಿ ಪತ್ರಕರ್ತರು ಸಾವನಪ್ಪಿದ್ದಾರೆ. ಹೀಗೆ ಸಾವನಪ್ಪಿದ ಪತ್ರಕರ್ತರಿಗೆ ಸರ್ಕಾರಗಳು ಪರಿಹಾರದ ಪ್ಯಾಕೇಜ್ ನೀಡಿದರೂ ಸಹ ಅವರ ದುಡಿಮೆಯನ್ನೇ ನಂಬಿದ ಕುಟುಂಬಗಳು ಅತಂತ್ರ ಸ್ಥಿತಿ ಎದುರಿಸುವಂತಾಗಿದೆ.

ಅತ್ಯಂತ ಒತ್ತಡ, ಅಭದ್ರತೆ, ಅಸುರಕ್ಷತೆಯಲ್ಲಿ ನಿರಂತವಾಗಿ ಸಮಾಜದ ಹಿತಕ್ಕಾಗಿ ಕಾರ್ಯನಿರ್ವಹಿಸುವ ಮಾಧ್ಯಮ ಪ್ರತಿನಿಧಿಗಳ ಹಿತಕಾಪಾಡಲು ಸರ್ಕಾರಗಳು ಜಾಗತಿಕ ಮಟ್ಟದಲ್ಲಿ ಆಯಾ ಕಾಲಘಟ್ಟಕ್ಕೆ ಅನುಕೂಲವಾಗುವಂತೆ ನೀತಿ ನಿಯಮಗಳನ್ನು ರೂಪಿಸುವ ಅಗತ್ಯವಿದೆ.




## ಪ್ರಗತಿ ಪಥದಲ್ಲಿ ಬಾಗಲಕೋಟ ಜಿಲ್ಲೆಯ ಬಾದಾಮಿಯ

# ಕಿತ್ತೂರ ಚೆನ್ನಮ್ಮಾ ಮಹಿಳಾ ಪತ್ತಿನ ಸಹಕಾರಿ ಸಂಘ

ದೇಶದ ಆರ್ಥಿಕ ಅಭಿವೃದ್ಧಿಗಾಗಿ ಸಹಕಾರ ಕ್ಷೇತ್ರದ ಕೊಡುಗೆ ಅಪಾರವಾಗಿದೆ. "ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ" ಎನ್ನುವುದು ಸಹಕಾರ ತತ್ವ. ಪ್ರತಿಯೊಂದು ಕ್ಷೇತ್ರದಲ್ಲಿ ಮತ್ತು ಪ್ರತಿಯೊಬ್ಬರ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಸಹಕಾರ ಕ್ಷೇತ್ರದಲ್ಲಿ ಬಾಗಲಕೋಟ ಜಿಲ್ಲೆಯ ಬಾದಾಮಿಯ ಕಿತ್ತೂರ ಚೆನ್ನಮ್ಮಾ ಮಹಿಳಾ ಪತ್ತಿನ ಸಹಕಾರಿ ಸಂಘವೂ ಸದಸ್ಯರಿಗೆ ಉಪಯುಕ್ತ ಸೇವೆಗಳನ್ನು ನೀಡುವ ಮೂಲಕ ಪ್ರಗತಿ ಪಥದತ್ತ ಸಾಗುತ್ತಿದೆ. ಜನಸಾಮಾನ್ಯರ ವಿಶ್ವಾಸವನ್ನು ಗಳಿಸುವಲ್ಲಿ ಸಂಘವು ಯಶಸ್ವಿಯಾಗಿದೆ. ಪ್ರಾಮಾಣಿಕ ಸೇವೆಗೆ ಸಾಕ್ಷಿಯಾಗಿದೆ.

ಸಂಘವೂ ದಿನಾಂಕ : 08-11-1995ರಂದು ಸ್ಥಾಪನೆಯಾಗಿದೆ. ತನ್ನ ಸದಸ್ಯರ ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಸಾಲ ಸೌಲಭ್ಯಗಳನ್ನು ನೀಡುತ್ತಿದೆ. ಸಂಘ ಪ್ರಾರಂಭದಲ್ಲಿ ಹೈನುಗಾರಿಕೆ ಉದೇಶಕ್ಕಾಗಿ ಸಾಲ ಬಿಡುಗಡೆ ಮಾಡುತ್ತಾ ಬಂದಿದ್ದು ತದ ನಂತರ ಗುಡಿ ಕೈಗಾರಿಕೆ ಸಲುವಾಗಿ ಸಾಲವನ್ನು  ಬಟವಡೆ ಮಾಡುತ್ತಿದೆ. ಸಂಘವೂ 1995 ರಲ್ಲಿ ಕೇವಲ 996 ಜನ ಸದಸ್ಯರನ್ನು ಒಳಗೊಂಡು ವ್ಯವಹಾರ ಪ್ರಾರಂಭಿಸಿ ಪ್ರಸ್ತುತ 6015 ಜನ ಸದಸ್ಯರನ್ನು ಹೊಂದಿದೆ. ಸಂಘವೂ ನಿರಂತರ ಲಾಭದಲ್ಲಿ ಸಾಗಿದೆ. 53 ನೇ ಅಖಿಲ ಭಾರತ ಸಹಕಾರಿ ಸಪ್ತಾಹದಲ್ಲಿ "ಉತ್ತಮ ಸಹಕಾರಿ ಸಂಘ" ಪ್ರಶಸ್ತಿಗೆ ಬಾಜನವಾಗಿದೆ. ಸಹಕಾರ ಕ್ಷೇತ್ರದ ಬೆಳವಣಿಗೆಗೆ ಮತ್ತು ಸಂಘದ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಸಂಘವೂ ಸಂಪೂರ್ಣ ಗಣಕಿಕೃತ ವ್ಯವಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದೆ. ಸುಸಜ್ಜಿತವಾದ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ದಕ್ಷ ಆಡಳಿತ ಮಂಡಳಿ ಹಾಗೂ ಸಿಬ್ಬಂದಿವರ್ಗದ ನಿಸ್ವಾರ್ಥ ಸೇವೆ ಸಂಘದ ಪ್ರಗತಿಗೆ ಕಾರಣ ಎಂದರೆ ತಪ್ಪಾಗಲಾರದು.

**– ಜಯಶ್ರೀ ಹುನಗುಂದ,**

ಮುಖ್ಯಕಾರ್ಯನಿರ್ವಹಣಾಧಿಕಾರಿ, ಬಾಗಲಕೋಟ ಜಿ.ಸ.ಯೂ.

ಪ್ರಗತಿ ಪಕ್ಷಿನೋಟ (ರೂ ಲಕ್ಷಗಳಲ್ಲಿ)

| ಅನಂ | ವಿವರ | 2017–18 | 2018–19 |
|---|---|---|---|
| 1 | ಸದಸ್ಯರ ಸಂಖ್ಯೆ | 5834 | 6015 |
| 2 | ಠೇವಣಿಗಳು | 2848.30 | 3453.47 |
| 3 | ದುಡಿಯುವ ಬಂಡವಾಳ | 3424.43 | 4079.53 |
| 4 | ಸಾಲಗಳು | 1327.58 | 1236.81 |
| 5 | ಲಾಭಾಂಶ (ಡಿವ್ಹಿಡೆಂಡ್) | 12 % | 6 % |
| 6 | ಲಾಭ | 45.11 | 50.08 |

## ಆಡಳಿತ ಮಂಡಳಿ


ಮಮತಾ ಆರ್.
ಅಧ್ಯಕ್ಷರು


ಮಹಾದೇವಿ ಎಂ.
ಉಪಾಧ್ಯಕ್ಷರು


ಶಾಂತವ್ವ ಎಚ್.
ನಿರ್ದೇಶಕರು


ಶಂಕ್ರವ್ವ ವಿ.
ನಿರ್ದೇಶಕರು


ನೀಲವ್ವ ವಿ.
ನಿರ್ದೇಶಕರು


ಶಂಕ್ರವ್ವ ಜಿ.
ನಿರ್ದೇಶಕರು


ಬಸವ್ವ ಕೆ.
ನಿರ್ದೇಶಕರು


ಮಹಾದೇವಿ ವಿ.
ನಿರ್ದೇಶಕರು


ಜಯಶ್ರೀ ಎಸ್.
ನಿರ್ದೇಶಕರು


ಕಸ್ತೂರವ್ವ ಜಿ.
ನಿರ್ದೇಶಕರು


ಶೋಭಾ
ನಿರ್ದೇಶಕರು


ದುರ್ಗಾದೇವಿ ಎಫ್.
ನಿರ್ದೇಶಕರು


ಲೀಲಾವತಿ ಬಿ.
ಕಾರ್ಯನಿರ್ವಾಹಕರು

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಸಹಕಾರ ಸಂಘದ ನೋಂದಣಿ ಅರ್ಜಿಯ ಜೊತೆಯಲ್ಲಿ ಸಹಕಾರ ಸಂಘದ ಪ್ರಸ್ತಾವಿತ ಉಪವಿಧಿಗಳ .............................. ಪ್ರತಿಗಳನ್ನು ಲಗತ್ತಿಸತಕ್ಕದ್ದು.**

ಎ) ಮೂರು ಪ್ರತಿಗಳು

ಬಿ) ಐದು ಪ್ರತಿಗಳು

ಸಿ) ಆರು ಪ್ರತಿಗಳು

ಡಿ) ಏಳು ಪ್ರತಿಗಳು

**2. ಉಪವಿಧಿ ತಿದ್ದುಪಡಿಯನ್ನು ಸಾಮಾನ್ಯ ಸಭೆ ಅಂಗೀಕರಿಸಿದ ದಿನಾಂಕದಿಂದ ............................ ದಿವಸಗಳೊಳಗೆ ಅನುಮೋದನೆಗೆ ನಿಬಂಧಕರಿಗೆ ಸಲ್ಲಿಸತಕ್ಕದ್ದು.**

ಎ) 40 ದಿವಸಗಳು

ಬಿ) 60 ದಿವಸಗಳು

ಸಿ) 15 ದಿವಸಗಳು

ಡಿ) 30 ದಿವಸಗಳು

**3. ಸಹಕಾರ ಸಂಘಗಳ ನಿಬಂಧಕರು ನೊಂದಣಿ ಅರ್ಜಿಯನ್ನು ಸ್ವೀಕರಿಸಿದ ........................... ದಿವಸಗಳೊಳಗೆ ವಿಲೇವಾರಿ ಮಾಡಲು ಸಾಧ್ಯವಾಗದಿದ್ದರೆ ಅಂತ ಸಂಘದ ನೊಂದಣಿ ಮಾಡಲ್ಪಟ್ಟಿದೆ ಎಂದು ಭಾವಿಸ ತಕ್ಕದ್ದು.**

ಎ) ಒಂದು ತಿಂಗಳು

ಬಿ) ಮೂರು ತಿಂಗಳು

ಸಿ) ಎರಡು ತಿಂಗಳು

ಡಿ) ನಾಲ್ಕು ತಿಂಗಳು

**4. ಸಹಕಾರ ಬ್ಯಾಂಕಿನ ವಿಲೀನತೆ, ಆಸ್ತಿಗಳ ಮತ್ತು ಹೊಣೆಗಳ ವರ್ಗಾವಣೆ ಮತ್ತು ವಿಭಜನೆಗೆ .................. ಲಿಖಿತ ಪೂರ್ವಾನುಮತಿ ಅಗತ್ಯವಿರುತ್ತದೆ.**

ಎ) ಸರ್ಕಾರದ

ಬಿ) ನಬಾರ್ಡ್‌ನ

ಸಿ) ರಿಸರ್ವ್ ಬ್ಯಾಂಕಿನ

ಡಿ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ

**5. ಸಹಕಾರ ಸಂಘದ ವಾರ್ಷಿಕ ಅಯ–ವ್ಯಯ (Budget) ಮಂಜುರಾತಿ ಅಧಿಕಾರ .................... ದತ್ತವಾಗಿದೆ.**

ಎ) ಸಂಘದ ಅಧ್ಯಕ್ಷರು

ಬಿ) ಆಡಳಿತ ಮಂಡಲಿ

ಸಿ) ನಿಬಂಧಕರು

ಡಿ) ಮಹಾಸಭೆ

**6. ಸಹಕಾರ ಸಂಘಗಳ ಕಾಯ್ದೆ 1959 ಕಲಂ 29 ಸಿ ರೀತ್ಯಾ ನಿರ್ದೇಶಕರ ಅನರ್ಹ ಗರಿಷ್ಠ ಅವಧಿ ............................ ವರ್ಷಗಳು ಮೀರಿ ಆದೇಶಿಸುವಂತಿಲ್ಲ.**

ಎ) ನಾಲ್ಕು ವರ್ಷಗಳು

ಬಿ) ಐದು ವರ್ಷಗಳು

ಸಿ) ಮೂರು ವರ್ಷಗಳು

ಡಿ) ಆರು ವರ್ಷಗಳು

**7. ಸಹಕಾರ ಸಂಘದ ಆಡಳಿತ ಮಂಡಳಿಯಲ್ಲಿ ಆಕಸ್ಮಿಕವಾಗಿ ಖಾಲಿ ಬಿದ್ದ ನಿರ್ದೇಶಕರ ಸ್ಥಾನವನ್ನು ಭರ್ತಿ ಮಾಡಲು ಸಹಕಾರ ಚುನಾವಣಾ ಪ್ರಾಧಿಕಾರ ತೆಗೆದುಕೊಳ್ಳಬೇಕಾದ ಗರಿಷ್ಠ ಅವಧಿ ........................**

ಎ) 30 ದಿವಸಗಳು

ಬಿ) 60 ದಿವಸಗಳು

ಸಿ) 15 ದಿವಸಗಳು

ಡಿ) 90 ದಿವಸಗಳು

**8. ಸಹಕಾರ ಸಂಘದ ಮಹಾಸಭೆ ಮತ್ತು ಆಡಳಿತ ಮಂಡಳಿ ಸಭೆ ಕರೆಯಲು ನೋಟಿಸ್ ನೀಡುವ ಅಧಿಕಾರ ..................... ಇವರಿಗೆ ದತ್ತವಾಗಿದೆ.**

ಎ) ಸಂಘದ ಅಧ್ಯಕ್ಷರು

ಬಿ) ಉಪಾಧ್ಯಕ್ಷರು

ಸಿ) ವ್ಯವಸ್ಥಾಪಕರು

ಡಿ) ಮುಖ್ಯಕಾರ್ಯ ನಿರ್ವಾಹಕರು

**9. ಸಹಕಾರ ಸಂಘದಲ್ಲಿ ಅವಿಶ್ವಾಸ ಗೊತ್ತುವಳಿ ಸಭೆ ಅಧ್ಯಕ್ಷತೆ ವಹಿಸುವವರು ............................**

ಎ) ನಿಬಂಧಕರು

ಬಿ) ಸಂಘದ ಅಧ್ಯಕ್ಷರು

ಸಿ) ನಿಬಂಧಕರ ಅಧಿಕೃತ ಅಧಿಕಾರಿ

ಡಿ) ಮುಖ್ಯಕಾರ್ಯನಿರ್ವಾಹಕರು

**10. ಸಹಕಾರ ಸಂಘದ ಅವಿಶ್ವಾಸ ಗೊತ್ತುವಳಿ ಸಭೆಗೆ ಹಾಜರಾಗಲು ಹಾಗೂ ಮತ ಚಲಾಯಿಸಲು ಅರ್ಹವಿರುವವರು ...................**

ಎ) ನಾಮಿಕ ನಿರ್ದೇಶಕರು

ಬಿ) ಪದನಿಮಿತ್ತ ನಿರ್ದೇಶಕರು

ಸಿ) ಚುನಾಯಿತ ನಿರ್ದೇಶಕರು

ಡಿ) ಮುಖ್ಯ ಕಾರ್ಯ ನಿರ್ದೇಶಕರು

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

**1 - C, 2 -D, 3 –C, 4 –C, 5 –D , 6 –C , 7 –C , 8 – D, 9 –C, 10 –B**